ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಕೆ.ಎಲ್.ರಾಹುಲ್ ಹಾಗು ಶುಭಮನ್ ಗಿಲ್ ಅವರ ಭರ್ಜರಿ ಶತಕ ನೆರವಿನಿಂದ ಭಾರತ ಅಫ್ಗಾನಿಸ್ಥಾನ ವಿರುದ್ಧದ ಟೆಸ್ಟ್ ಪಂದ್ಯದ ಮೊದಲ ದಿನ ಮೇಲುಗೈ ಸಾಧಿಸಿದೆ. 85 ಓವರ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 368 ರನ್ ಗಳಿಸಿದೆ.

07 ಜೂನ್, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 88 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಜಗತ್ತು ಡಾಲರ್‌ನಿಂದ ದೂರ ಸಾಗುತ್ತಿದೆಯೇ? » 2

ಬೇಲೂರು ಗುಡಿಸಲು ಮುಕ್ತ-ಶೀಘ್ರವೇ ಅರ್ಹರಿಗೆ ನಿವೇಶನ » 3

ಅಂಡಮಾನ್ ದ್ವೀಪದಲ್ಲಿ ನೈಸರ್ಗಿಕ ಅನಿಲ ನಿಕ್ಷೇಪ » 4

ರಾಮಲಿಂಗಾ ರೆಡ್ಡಿ ರಾಜೀನಾಮೆ ವಾಪಾಸ್

ಕುಟುಂಬದ ಸಮಸ್ಯೆ ಎಂದ ಸಿಎಂ ಡಿ.ಕೆ.ಶಿ. | ಬಗೆಹರಿದ ಖಾತೆ ಗೊಂದಲ

• ಪ್ರಜೋದಯ ವರದಿ

ಬೆಂಗಳೂರು: ಜಲಸಂಪನ್ಮೂಲ ಖಾತೆ ನೀಡಿದ್ದಕ್ಕೆ ಅಸಮಾಧಾನಗೊಂಡು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ರಾಮಲಿಂಗಾ ರೆಡ್ಡಿ ಶನಿವಾರ ತಮ್ಮ ನಿರ್ಧಾರದಿಂದ ಹಿಂದೆ ಸರಿದಿದ್ದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗು ಹೈ ಕಮಾಂಡ್ ನಡೆಸಿದ ಸಂಧಾನ ಯಶಸ್ವಿಯಾಗಿದೆ.

ಶುಕ್ರವಾರ ತಡರಾತ್ರಿ 2 ಗಂಟೆಗೆ ರಾಮಲಿಂಗಾ ರೆಡ್ಡಿ ಅವರನ್ನು ಭೇಟಿಯಾಗಿದ್ದ ಡಿ.ಕೆ.ಶಿವಕುಮಾರ್ ಅವರು ಸುದೀರ್ಘ ಮಾತುಕತೆ ನಡೆಸಿದ್ದರು. ಬಳಿಕ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸಮ್ಮುಖದಲ್ಲೇ ರಾಮಲಿಂಗಾರೆಡ್ಡಿ ಅವರು ರಾಜೀನಾಮೆ ವಾಪಾಸ್ ಪಡೆಯುವುದಾಗಿ ಘೋಷಿಸುವ ಮೂಲಕ ಎಲ್ಲಾ ಗೊಂದಲಗಳಿಗೆ ತೆರೆ ಎಳೆದಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ರೆಡ್ಡಿ ಅವರು, ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೆ. ಆದರೆ ಮುಖ್ಯಮಂತ್ರಿ ರಾಜೀನಾಮೆ ಸ್ವೀಕರಿಸುವುದಿಲ್ಲ ಎಂದಿದ್ದಾರೆ. ರಾಜೀನಾಮೆ ಅಂಗೀಕಾರ ಮಾಡುವುದಿಲ್ಲ ಎಂದರೆ ರಿಜೆಕ್ಟ್ ಎಂದರ್ಥ. ಮುಖ್ಯಮಂತ್ರಿ ಜೊತೆ ಮಾತನಾಡಿದ್ದೇನೆ. ಖಾತೆ ವಿಷಯವನ್ನು ಮುಖ್ಯಮಂತ್ರಿ ಹಾಗು ಹೈಕಮಾಂಡ್ ನಾಯಕರು ನೋಡಿಕೊಳ್ಳುತ್ತಾರೆಂದು ಹೇಳಿದ್ದಾರೆ. ಎಲ್ಲಾ ಗೊಂದಲಗಳೂ ಬಗೆಹರಿದಿವೆ ಎಂದರು.

ಪಕ್ಷ ಬೆಳೆಸಲು ರೆಡ್ಡಿ ಕೆಲಸ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ನಮ್ಮ ಕುಟುಂಬದ ಸಮಸ್ಯೆ ಬಗೆಹರಿಸಿಕೊಳ್ಳುತ್ತೇವೆ. ನಾನು ಮುಖ್ಯಮಂತ್ರಿ, ಅವರು (ರಾಮಲಿಂಗಾ ರೆಡ್ಡಿ) ಸಚಿವರು. ಆದರೂ ನಾವೆಲ್ಲರೂ ಸ್ನೇಹಿತರು. ರಾಮಲಿಂಗಾ ರೆಡ್ಡಿ ಅವರು ಪಕ್ಷದ ಹಿರಿಯರು, ಬೆಂಗಳೂರಿನಲ್ಲಿ ಪಕ್ಷ ಉಳಿಸುತ್ತಿರುವವರು. ಪಕ್ಷ ಬೆಳೆಸಲು ಕೆಲಸ ಮಾಡುತ್ತಿದ್ದಾರೆಂದರು.

ನಾವು ಖಾತೆ ವಿಚಾರವಾಗಿ ಏನು ಮಾತನಾಡಿದ್ದೇವೆ, ಬೇರೆ ಯಾವ ವಿಚಾರ ಮಾತನಾಡಿದ್ದೇವೆ ಎಂದೆಲ್ಲಾ ಮಾಧ್ಯಮಗಳ ಮುಂದೆ ಹೇಳಲು ಆಗುತ್ತದೆಯೇ. ಇಂತಹ ಬೆಳವಣಿಗೆಗಳು ಆಗುತ್ತಿರಬೇಕು. ಮಳೆ, ಗುಡುಗು, ಸಿಡಿಲು, ಸೂರ್ಯ ಮುಳುಗುವುದು, ಹುಟ್ಟುವುದು ಸಹಜ ಎಂದು ಹೇಳಿದರು.

ಲೂಟಿ ಹೊಡೆಯುವ ಖಾತೆಗಳ ಮೇಲೆ ಕಣ್ಣು

ಕಾಂಗ್ರೆಸ್ ನಾಯಕರ ಕಣ್ಣಿರುವುದು ಕೇವಲ ಲೂಟಿ ಹೊಡೆಯುವ ಖಾತೆಗಳ ಮೇಲೆ ಮಾತ್ರ. ರೈತರು, ವಿದ್ಯಾರ್ಥಿಗಳ ಕಷ್ಟ ಇವರಿಗೆ ಬೇಕಾಗಿಲ್ಲ. ಸಾವಿರಾರು ಕೋಟಿ ರೂಪಾಯಿ ಸಂಪನ್ಮೂಲ, ಗುತ್ತಿಗೆ ಮತ್ತು ಕಮಿಷನ್ ದಂಧೆಗೆ ಅನುಕೂಲವಾಗುವ ಖಾತೆಗಳಿಗಾಗಿ ಮಾತ್ರ ಕಾಂಗ್ರೆಸ್ ನಾಯಕರ ನಡುವೆ ರಣಹದ್ದುಗಳಂತೆ ಭಾರೀ ಪೈಪೋಟಿ ನಡೆಯುತ್ತಿದೆ. ಡಿ.ಕೆ.ಶಿವಕುಮಾರ್ ಅವರೇ ಇದೇನಾ ನಿಮ್ಮ ಜನಪರ ಆಡಳಿತವೆಂದು ಆರ್.ಅಶೋಕ್ ಪ್ರಶ್ನಿಸಿದ್ದಾರೆ.

ಬೆಂಗಳೂರು ನಗರದ ಯೋಜನೆ ಮತ್ತು ಅಭಿವೃದ್ಧಿಗೆ ಅತ್ಯಂತ ಮಹತ್ವವಾಗಿರುವ ಬಿಡಿಎ ಮತ್ತು ಬಿಎಂಆರ್‌ಡಿಎ ಅನ್ನು ಮುಖ್ಯಮಂತ್ರಿ ತಮ್ಮ ಬಳಿಯೇ ಇಟ್ಟುಕೊಂಡಿದ್ದಾರೆ. ಹಾಗಿದ್ದರೆ ಸಚಿವರ ಬಳಿ ಉಳಿದಿರುವುದು ಏನು. ಈ ಸರ್ಕಾರದಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವರು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿದೆ ಎಂದು ಕುಟುಕಿದ್ದಾರೆ.

ಸರ್ಕಾರಕ್ಕೆ ಅಶೋಕ್ ತರಾಟೆ

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸರ್ಕಾರದ ಖಾತೆ ಹಂಚಿಕೆ ಪ್ರಹಸನ, ಕಾಂಗ್ರೆಸ್ ಪಕ್ಷದ ನಿಜವಾದ ಆದ್ಯತೆಗಳೇನು ಅನ್ನುವುದನ್ನು ರಾಜ್ಯದ ಜನರ ಮುಂದೆ ಸಂಪೂರ್ಣವಾಗಿ ಬೆತ್ತಲು ಮಾಡಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಲೇವಡಿ ಮಾಡಿದ್ದಾರೆ.

ಒಂದು ಕಡೆ ರಾಜ್ಯದ ಬೆನ್ನೆಲುಬಾದ ರೈತರು ಮುಂಗಾರು ಬಿತ್ತನೆಗೆ ಸಿದ್ಧತೆ ನಡೆಸುತ್ತಿರುವ ಈ ಅತ್ಯಂತ ಮಹತ್ವದ ಸಮಯದಲ್ಲಿ ಕರ್ನಾಟಕಕ್ಕೆ ಒಬ್ಬ ಪೂರ್ಣಾವಧಿ ಕೃಷಿ ಸಚಿವರೇ ಇಲ್ಲ. ಬಿತ್ತನೆ ಬೀಜಗಳ ಲಭ್ಯತೆ, ರಸಗೊಬ್ಬರಗಳ ಪೂರೈಕೆ, ಬೆಳೆ ಸಾಲ, ಬೆಳೆ ವಿಮೆ, ಮಳೆ ಪರಿಸ್ಥಿತಿಯ ಅವಲೋಕನ, ಇವೆಲ್ಲದರ ಬಗ್ಗೆ ಕಾಳಜಿ ವಹಿಸಬೇಕಾದ ಕೃಷಿ ಇಲಾಖೆ ಈಗ ಸಚಿವರಿಲ್ಲದೆ ಅನಾಥವಾಗಿದೆ ಎಂದಿದ್ದಾರೆ.

ಮತ್ತೊಂದು ಕಡೆ ಹೊಸ ಶೈಕ್ಷಣಿಕ ವರ್ಷ ಆರಂಭವಾಗಿದೆ. ಸಾವಿರಾರು ಸರ್ಕಾರಿ ಶಾಲೆಗಳಲ್ಲಿ ಮಳೆ ಬಂದರೆ ಸೋರುವ ಕೊಠಡಿಗಳು, ಕುಸಿಯುವ ಗೋಡೆಗಳು ದುರಸ್ತಿಗಾಗಿ ಕಾಯುತ್ತಿವೆ, ಶೌಚಾಲಯಗಳ ಕೊರತೆ ಹಾಗೇ ಇವೆ. ಲಕ್ಷಾಂತರ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ ವಿತರಣೆ, ಶಿಕ್ಷಕರ ಕೊರತೆ ನೀಗಿಸುವ ನೂರಾರು ತುರ್ತು ಸವಾಲುಗಳಿಗೆ ಬೆಟ್ಟದಷ್ಟಿವೆ. ಆದರೆ ರಾಜ್ಯಕ್ಕೆ ಒಬ್ಬ ಶಿಕ್ಷಣ ಸಚಿವರೇ ಗತಿಯಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

> ಕಾಂಗ್ರೆಸ್ ಸರ್ಕಾರದಲ್ಲಿ ಖಾತೆ ಹಂಚಿಕೆ ಎಂಬುದು ಅಭಿವೃದ್ಧಿಗಾಗಿ, ಆಡಳಿತಕ್ಕಾಗಿ ಮಾಡಿರುವ ವ್ಯವಸ್ಥೆಯಲ್ಲ, ಬದಲಿಗೆ ಸಂಪನ್ಮೂಲ ಹಂಚಿಕೆಗೆ, ರಾಜ್ಯದ ಜನರ ತೆರಿಗೆ ಹಣವನ್ನ ಲೂಟಿ ಮಾಡಲು ಮಾಡಿದ ರಾಜಕೀಯ ಹೊಂದಾಣಿಕೆ.
> -ಆರ್.ಅಶೋಕ್, ವಿರೋಧ ಪಕ್ಷದ ನಾಯಕ

ಸಿಇಟಿ ಫಲಿತಾಂಶ: 2,92,782 ವಿದ್ಯಾರ್ಥಿಗಳು ಅರ್ಹ

• ಪ್ರಜೋದಯ ವರದಿ

ಬೆಂಗಳೂರು: ಇಂಜಿನೀಯರಿಂಗ್ ಸೇರಿ ವಿವಿಧ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ್ದ 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಯ ಫಲಿತಾಂಶ ಶನಿವಾರ ಪ್ರಕಟವಾಗಿದೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಫಲಿತಾಂಶವನ್ನು ಪ್ರಕಟಿಸಿದರು.

ಮೆಡಿಕಲ್, ಇಂಜಿನೀಯರಿಂಗ್ ಸೇರಿ ವಿವಿಧ ಕೋರ್ಸ್‌ಗಳಿಗೆ 2,92,782 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ. ಬೆಂಗಳೂರಿನ ಆರ್‌ವಿ ಕಾಲೇಜಿನ ಇಂಜಿನೀಯರಿಂಗ್ ವಿದ್ಯಾರ್ಥಿನಿ ತನಿಷಾ ಕಾರ್ತಿಕ್ ಮೊದಲ ಸ್ಥಾನ ಪಡೆದಿದ್ದಾರೆ. ಸೃಜನ್‌ಗೆ 2ನೇ ಹಾಗು ನಿನಾದ್ ವಸಿಷ್ಠ ಮೂರನೇ ಸ್ಥಾನ ಪಡೆದಿದ್ದಾರೆಂದು ಅವರು ತಿಳಿಸಿದ್ದಾರೆ.

ಇಂಜಿನೀಯರಿಂಗ್‌ಗೆ 2,82,603 ಮಂದಿ, ಬಿಎಸ್ಸಿ (ಕೃಷಿ, ರೇಷ್ಮೆ, ಆಹಾರ ವಿಜ್ಞಾನ)ಗೆ 2,09,220 ಮಂದಿ, ಬಿ.ವಿ.ಎಸ್ಸಿ (ಪಶು ವೈದ್ಯಕೀಯ) 2,12,909 ಮಂದಿ, ಬಿ.ಫಾರ್ಮ್‌ಗೆ 2,86,609 ಮಂದಿ, ನರ್ಸಿಂಗ್‌ಗೆ 2,18,785 ಮಂದಿ, ಕೃಷಿ ಪ್ರಾಯೋಗಿಕ 21,775 ಮಂದಿ ಮತ್ತು ಪ್ರಾಯೋಗಿಕ ವಿಭಾಗದಲ್ಲಿ 21, 838 ಮಂದಿ ಅರ್ಹತೆ ಪಡೆದಿದ್ದಾರೆ.

ರಾಜ್ಯದ 745 ಪರೀಕ್ಷಾ ಕೇಂದ್ರಗಳಲ್ಲಿ ಏ.23 ಮತ್ತು 24 ರಂದು ಸಿಇಟಿ ಪರೀಕ್ಷೆ ನಡೆಸಲಾಗಿತ್ತು. 23 ರಂದು ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ ಹಾಗು 24 ರಂದು ಗಣಿತ, ಜೀವ ವಿಜ್ಞಾನ ಪರೀಕ್ಷೆಗಳು ನಡೆದಿದ್ದವು. ಹೊರನಾಡು ಮತ್ತು ಗಡಿನಾಡು ಕನ್ನಡಿಗರಿಗೆ ಏಪ್ರಿಲ್ 22 ರಂದು ಕನ್ನಡ ಭಾಷಾ ಪರೀಕ್ಷೆ ಬೆಂಗಳೂರು, ಮಂಗಳೂರು, ವಿಜಯಪುರ ಮತ್ತು ಬೆಳಗಾವಿ ನಗರಗಳ ಒಟ್ಟು ಐದು ಕೇಂದ್ರಗಳಲ್ಲಿ ನಡೆದಿತ್ತು. ಸುಮಾರು 3.30 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 2,92,782 ಅಭ್ಯರ್ಥಿಗಳು ಪ್ರವೇಶಕ್ಕೆ ಅರ್ಹರಾಗಿದ್ದಾರೆಂದು ಸಚಿವರು ತಿಳಿಸಿದ್ದಾರೆ.

ರಸ್ತೆಗಳಲ್ಲಿ ಕಾಡಾನೆಗಳ ಓಡಾಟ: ಸ್ಥಳೀಯರಲ್ಲಿ ಆತಂಕ

• ಪ್ರಜೋದಯ ವರದಿ

ಸಕಲೇಶಪುರ: ತಾಲ್ಲೂಕಿನ ಜನನಿಬಿಡ ಪ್ರದೇಶ, ರಸ್ತೆಗಳಲ್ಲಿ ಕಾಡಾನೆಗಳ ಓಡಾಟ ಹೆಚ್ಚಾಗಿದ್ದು ವಾಹನ ಸವಾರರು, ಸ್ಥಳೀಯರು ಹಾಗು ಕೂಲಿ ಕಾರ್ಮಿಕರು ಆತಂಕಗೊಂಡಿದ್ದಾರೆ.

ತಾಲ್ಲೂಕಿನ ಸುಂಡೆಕೆರೆ-ಕಬ್ಬಿನಹಳ್ಳಿ ರಸ್ತೆಯಲ್ಲಿ ಮರಿಗಳೊಂದಿಗೆ ಕಾಡಾನೆ ಗುಂಪೊಂದು ತೋಟದಿಂದ ಮತ್ತೊಂದು ತೋಟಕ್ಕೆ ದಾಟುತ್ತಿದ್ದ ವೇಳೆ ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸಿ ಕೊಂಡು ನಿಂತಿದ್ದ ವೇಳೆ, ರೇಡಿಯೋ ಕಾಲರ್ ಇರುವ ಕಾಡಾನೆಯೊಂದು ವಾಹನಗಳತ್ತ ದಾಳಿ ಮಾಡಲು ನುಗ್ಗಿದೆ.

ಕೂಡಲೇ ವಾಹನಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ನಂತರ ಎರಡು ಮರಿಗಳನ್ನು ರಸ್ತೆ ದಾಟಿಸಿಕೊಂಡು ಕಾಫಿ ತೋಟದೊಳಗೆ ಕರೆದೊಯ್ದಿವೆ. ಮತ್ತೊಂದೆಡೆ ತಂತಿ ಬೇಲಿ ದಾಟಿ ಎರಡು ದೈತ್ಯಾಕಾರದ ಸಲಗಗಳು ರಸ್ತೆ ದಾಟಿ ಕಾಫಿ ತೋಟಕ್ಕೆ ಹೋದ ಘಟನೆ ತಾಲ್ಲೂಕಿನ ಗುಲಗಳಲೆ ಗ್ರಾಮದಲ್ಲಿ ನಡೆದಿದೆ.

ತಾಲ್ಲೂಕಿನ ಸುಂಡೆಕೆರೆ, ಉದೇವಾರ, ಬಾಳುಗೋಡು, ಕಲ್ಲಳ್ಳಿ, ದಿನೇಕೆರೆ, ಕೆಸಗುಲಿ ಸುತ್ತಮುತ್ತ ಕಾಡಾನೆಗಳ ಉಪಟಳ ತೀವ್ರಗೊಂಡಿದೆ. ಕಾಡಾನೆಗಳ ಹಾವಳಿಯಿಂದ ಕಾಫಿ ಬೆಳೆಗಾರರು ಅಪಾರ ಪ್ರಮಾಣದ ನಷ್ಟ ಅನುಭವಿಸುತ್ತಿದ್ದಾರೆ. ಇನ್ನೊಂದೆಡೆ ಬೆಳಿಗ್ಗೆ 9 ಗಂಟೆ ನಂತರ ಕಾಫಿ ತೋಟದ ಕೆಲಸಕ್ಕೆ ಕಾರ್ಮಿಕರು ತೆರಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ವಿವಿಧೆಡೆ ಕಾಡಾನೆ ಸಂಚಾರ

ತಾಲ್ಲೂಕಿನ ವಡೂರು ಫಾರೆಸ್ಟ್, ಕೆಸಗುಲಿ ಗ್ರಾಮದ



ಪಿಂಟೋ ಅವರ ಕಾಡು ಗುಡ್ಡೆಟ್ಟ ಎಸ್ಟೇಟ್, ಮಾಗಡಿ ಗ್ರಾಮದ ಸ್ಮಶಾನ ಕಾಡು, ಮಾಗಡಿ ಎಸ್ಟೇಟ್ ಸಮೀಪ ಶಶಿಗೌಡ ಅವರ ತೋಟ, ಉದೇವಾರ ಗ್ರಾಮದ ಮೈಲಹಳ್ಳಿ ಎಸ್ಟೇಟ್, ಲಿಂಗಾಪುರ ಗ್ರಾಮದ ಮಲ್ಲೇಶ್ ಗೌಡರ ತೋಟ ಸಮೀಪ ಶಾಂತಿ ಪ್ಲಾಂಟೇಶನ್, ಉದೇವಾರ ಗ್ರಾಮದ ನಜೀರ್ ರೆಹಮಾನ್ ಅವರ ತೋಟ ಸಮೀಪ ಗುಡ್ಡಬೆಟ್ಟ ಎಸ್ಟೇಟ್, ಬ್ಯಾದನೆ ಗ್ರಾಮದ ಸುಂಡೆಕೆರೆ ಎಸ್ಟೇಟ್, ರಾಮಚಂದ್ರ ಅವರ ತೋಟ ಇಬ್ಬಡಿ ಶಾಂತಪುರ ಸುತ್ತಮುತ್ತ ಕಾಡಾನೆಗಳು ಸಂಚರಿಸುತ್ತಿವೆ.

ಹೆತ್ತೂರು ಮತ್ತು ಯಸಳೂರು ಹೋಬಳಿ ವ್ಯಾಪ್ತಿಯ ಮರ್ಕಳ್ಳಿ ಗ್ರಾಮದ ಕಲ್ಲುತೋಟ, ಹಾಡ್ಲೂಗಡ್ಡೆ ಗ್ರಾಮದ ಹಿತರ್ಗದ್ದೆ ಕರಿಗುಂಡಿ, ಬೋರನಮನೆ, ಐಗೂರು ಗ್ರಾಮದ ನಿರ್ಮಾ ಎಸ್ಟೇಟ್, ಬಿಸ್ಲೆ ಗ್ರಾಮದ ಏನಿಕೋಲು ಬೆಟ್ಟ, ಗೊದ್ದು ಗ್ರಾಮದ ಅಜ್ಜಪ್ಪ ಗೌಡರ ಕಾಡು, ಬಾಳೆಕೆರೆ ಗ್ರಾಮದ ನೀಲಗಿರಿ ನೆಡುತೋಪು, ಹಾಡ್ಯ ಗ್ರಾಮದ ದೇವಿ ಎಸ್ಟೇಟ್ ಮತ್ತು ಮಲ್ಲಿಗೆ ಉಡುವೆ ಸುತ್ತಮುತ್ತ ಕಾಡಾನೆಗಳ ಹಿಂಡು ಕಾಣಿಸಿಕೊಂಡಿದೆ.

ಆಶಾಭಾವನೆ ಮೂಡಿಸಿದ ಮುಂಗಾರು: ಕೃಷಿ ಕಾರ್ಯ ಚುರುಕು

ಕೇರಳಕ್ಕೆ ಮುಂಗಾರು ಮಾರುತ ಪ್ರವೇಶ : ಜಿಲ್ಲೆಯಲ್ಲೂ ಮಳೆಯ ಸಿಂಚನ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

ಹಾಸನ: ಕೇರಳಕ್ಕೆ ಮುಂಗಾರು ಮಾರುತ ಪ್ರವೇಶಿಸುತ್ತಿದ್ದಂತೆಯೇ ಜಿಲ್ಲೆಯಲ್ಲೂ ಮಳೆ ಚುರುಕುಗೊಂಡಿದೆ. ಪೂರ್ವ ಮುಂಗಾರು ನಿರೀಕ್ಷಿತ ಮಟ್ಟದಲ್ಲಿ ಸುರಿಯದ ಕಾರಣ ಕೃಷಿ ಚಟುವಟಿಕೆಗೆ ಹಿನ್ನಡೆಯಾಗಿದ್ದರಿಂದ ಆತಂಕದಲ್ಲಿದ್ದ ರೈತರಿಗೆ ಈಗ ಮುಂಗಾರು ಆರಂಭದ ಲಕ್ಷಣ ಆಶಾಭಾವನೆ ಮೂಡಿಸಿದೆ.

ಶನಿವಾರ ಮುಂಜಾನೆಯಿಂದಲೇ ಜಿಲ್ಲೆಯ ಹಲವು ಭಾಗಗಳಲ್ಲಿ ಮೋಡಕವಿದ ವಾತಾವರಣ ನಿರ್ಮಾಣವಾಗಿದ್ದು, ಆಗಾಗ್ಗೆ ಮಳೆಯ ಸಿಂಚನ ಕಂಡುಬಂದಿದೆ. ನಗರದಲ್ಲಿ ಅಲ್ಪ ಪ್ರಮಾಣದ ಮಳೆಯಾಗಿದ್ದರೆ, ಸಕಲೇಶಪುರ, ಆಲೂರು, ಅರಕಲಗೂಡು ಹಾಗು ಬೇಲೂರು ತಾಲ್ಲೂಕು ಗಳಲ್ಲಿ ಉತ್ತಮ ಮಳೆಯಾಗಿದೆ.

ಮಳೆ ಮುನ್ಸೂಚನೆ ಸಿಗುತ್ತಿದ್ದಂತೆ ರೈತರು ಭತ್ತ, ಮೆಕ್ಕೆಜೋಳ ಸೇರಿ ವಿವಿಧ ಬೆಳೆಗಳ ಬಿತ್ತನೆಗೆ ಜಮೀನು ಸಿದ್ಧಪಡಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ. ಪೂರ್ವ ಮುಂಗಾರು ಮಳೆಯ ಕೊರತೆಯಿಂದ ಬಿತ್ತನೆ ಮುಂದೂಡಲಾಗಿತ್ತು. ಇದೀಗ ಮಳೆಯ ವಾತಾವರಣ ನಿರ್ಮಾಣವಾಗಿರುವುದರಿಂದ ಕೃಷಿ ಚಟುವಟಿಕೆಗಳಿಗೆ ವೇಗ ದೊರೆತಿದೆ.

ಹವಾಮಾನ ಇಲಾಖೆ ಮುನ್ಸೂಚನೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಜಿಲ್ಲೆಯ ಮಲೆನಾಡು ಹಾಗು ಅರೆಮಲೆನಾಡು ಭಾಗಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ. ಜಿಲ್ಲೆಯ ಪಶ್ಚಿಮ ಭಾಗವಾದ ಸಕಲೇಶಪುರ, ಆಲೂರು ಪ್ರದೇಶಗಳಲ್ಲಿ ಹೆಚ್ಚಿನ ಮಳೆಯಾಗುವ ನಿರೀಕ್ಷೆಯಿದ್ದು, ರೈತರು ಈ ಅವಕಾಶವನ್ನು ಬಳಸಿಕೊಂಡು ಬಿತ್ತನೆ ಕಾರ್ಯ ಕೈಗೊಳ್ಳಲು ಕೃಷಿ ಇಲಾಖೆ ಅಧಿಕಾರಿಗಳು ಸಲಹೆ ನೀಡಿದ್ದಾರೆ.

ಉತ್ತಮ ಮುಂಗಾರು ನಿರೀಕ್ಷೆ

ಈ ಬಾರಿ ಉತ್ತಮ ಮುಂಗಾರು ಮಳೆಯ » ನಾಲ್ಕನೇ ಪುಟದಲ್ಲಿ

13,510 ಕ್ವಿಂಟಾಲ್ ಬಿತ್ತನೆ ಬೀಜ ದಾಸ್ತಾನು

2026-27ನೇ ಸಾಲಿನ ಮುಂಗಾರು ಹಂಗಾಮಿಗೆ ಭತ್ತ, ರಾಗಿ, ಉದ್ದು, ಹೆಸರು, ಅಲಸಂದೆ, ಮುಸುಕಿನ, ಜೋಳ, ತೊಗರಿ, ಸೂರ್ಯಕಾಂತಿ, ನೆಲಗಡಲೆ ಬೆಳೆಗಳಿಗೆ 11,874 ಕ್ವಿಂಟಾಲ್ ಬೇಡಿಕೆ ಇದ್ದು, ಪ್ರಸ್ತುತ 13,510 ಕ್ವಿಂಟಾಲ್ ಬಿತ್ತನೆ ಬೀಜ ದಾಸ್ತಾನು ಮಾಡಿಕೊಳ್ಳಲಾಗಿದೆ. ಹಾಸನದ ಕೆ.ಎಸ್.ಎಸ್.ಸಿ.ನಲ್ಲಿ 6450 ಕ್ವಿಂಟಾಲ್, ಮತ್ತು ಎನ್.ಎಸ್.ಸಿಯಲ್ಲಿ 4,460 ಕ್ವಿಂಟಾಲ್ (ಭತ್ತ, ರಾಗಿ, ಉದ್ದು, ಹೆಸರು, ಅಲಸಂದೆ, ತೊಗರಿ ನೆಲಗಡಲೆ) ಬಿತ್ತನೆ ಬೀಜ ದಾಸ್ತಾನಿದೆ.

ಕೇವಲ 15,000 ಹೆಕ್ಟೇರ್‌ನಲ್ಲಿ ಬಿತ್ತನೆ

ಪೂರ್ವ ಮುಂಗಾರು ಹಂಗಾಮಿನಲ್ಲಿ ಈವರೆಗೆ ಶೇ.19ರಷ್ಟು ಮಳೆ ಕೊರತೆ ಕಾಣಿಸಿಕೊಂಡಿದೆ. ಕಳೆದ ವರ್ಷ ಈ ವೇಳೆಗೆ 256.7 ಮಿಲಿ ಮೀಟರ್ (ಶೇ.164ರಷ್ಟು) ಅಧಿಕ ಮಳೆಯಾಗಿ, 80,000 ಹೆಕ್ಟೇರ್ ಪ್ರದೇಶದಲ್ಲಿ ಶೇ.50 ರಷ್ಟು ಬಿತ್ತನೆಯಾಗಿತ್ತು. ಈ ವರ್ಷ ಮಳೆ ಕೊರತೆಯಿಂದ ಕಳೆದ ವಾರದಿಂದ ಬಿತ್ತನೆ ಕಾರ್ಯ ಪ್ರಾರಂಭವಾಗಿದೆ. ಹೀಗಾಗಿ ಜಿಲ್ಲೆಯಲ್ಲಿ ಈವರೆಗೆ ಕೇವಲ 15,000 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಪೂರ್ವ ಮುಂಗಾರಿನ ಬೆಳೆಗಳಾದ ಹೆಸರು, ಉದ್ದು ಎಳ್ಳು, ಸಿರಿಧಾನ್ಯ ಬೆಳೆಗಳು ನಿರೀಕ್ಷಿತ ಪ್ರಮಾಣದಲ್ಲಿ ಬಿತ್ತನೆಯಾಗಿಲ್ಲ.

ಇಬ್ಬರು ಬಾಂಗ್ಲಾ ಮಹಿಳೆಯರು ನಾಪತ್ತೆ

• ಪ್ರಜೋದಯ ವರದಿ

ಹಾಸನ: ಸಮಾಜ ಕಲ್ಯಾಣ ಇಲಾಖೆಯ ಅಧೀನದ ಶಕ್ತ ಸದನ ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಇಬ್ಬರು ಬಾಂಗ್ಲಾದೇಶದ ಮ

ಬದುಕೆಂಬ ಮೂರಕ್ಷರದ ಅಚ್ಚರಿ!

ಬದುಕು ಈ ಮೂರಕ್ಷರದ ಪದ ಯಾವಾಗಲೂ ಒಂದು ಅಚ್ಚರಿಯೆನಿಸಿ ನನ್ನ ಮನಸಿಗೆ ಕಾಡುವುದುಂಟು. ಏಕೆಂದರೆ ಆ ಭಗವಂತ ನಮಗೆಲ್ಲ ಕೊಟ್ಟಿರುವುದು ಒಂದೇ ಒಂದು ಬದುಕು. ಬಯಸಿದರೂ ನಾವು ಇನ್ನೊಂದು ಮತ್ತೊಂದು ಅಂತ ಲೆಕ್ಕ ಹಾಕಿ ಬೇರೆ ಬದುಕನ್ನು ಪಡೆಯಲಾರೆವು.

ಬದುಕು ಈ ಮೂರಕ್ಷರದ ಪದ ಯಾವಾಗಲೂ ಒಂದು ಅಚ್ಚರಿಯೆನಿಸಿ ನನ್ನ ಮನಸಿಗೆ ಕಾಡುವುದುಂಟು. ಏಕೆಂದರೆ ಆ ಭಗವಂತ ನಮಗೆಲ್ಲ ಕೊಟ್ಟಿರುವುದು ಒಂದೇ ಒಂದು ಬದುಕು. ಬಯಸಿದರೂ ನಾವು ಇನ್ನೊಂದು ಮತ್ತೊಂದು ಅಂತ ಲೆಕ್ಕ ಹಾಕಿ ಬೇರೆ ಬದುಕನ್ನು ಪಡೆಯಲಾರೆವು.

ಇರುವ ಒಂದು ಬದುಕನೇ ಸರಿಯಾಗಿ ಜೀವಿಸದೇ ಸುಮ್ಮನೆ ಮನಸಿಗೆ ಕಿರಿಕಿರಿ, ನೋವು ಮಾಡಿಕೊಂಡು ಬೇರೆಯವರಿಗೂ ನೆಮ್ಮದಿಯಿಂದ ಬದಕಲು ಬಿಡಲಾರದ ಮಂದಿ ಎಷ್ಟಿಲ್ಲ ಈ ಜಗದಲಿ. ಅವರಿಗೆಲ್ಲ ತಮ್ಮ ಬದುಕನು ತಮ್ಮದೇ ದೃಷ್ಟಿಕೋನದಿಂದ ನೋಡಿ ಗೊತ್ತಿರುವುದೇ ಹೊರತು ಬೇರೆಯವರ ದೃಷ್ಟಿಯಲ್ಲಿ ಆ ಬದುಕನು ಹೇಗೆ ಕಾಣಬೇಕು ಅಂತ ತಿಳಿದಿರುವುದಿಲ್ಲ ಅನಿಸುತ್ತೆ ಒಮ್ಮೊಮ್ಮೆ.

ಬದುಕಿನ ಬಗ್ಗೆ ಬರೆಯಲು ಕುಳಿತರೆ ಅದೆಷ್ಟೂ ಪದಗಳಲ್ಲಿ, ಸಾಲುಗಳಲ್ಲಿ ವಿವರಿಸಲಾರದ ಭಾವವೊಂದು ಮನಸಿಗೆ ಕಾಡುವುದುಂಟು. ಏಕೆಂದರೆ ಬದುಕನ್ನು ಬಂದ ಹಾಗೆಯೇ ಸ್ವೀಕರಿಸಿದವರ ಜಾಯಮಾನಕೆ ನಾನೂ ಸೇರುತ್ತೇನೆ. ಸಣ್ಣ-ಪುಟ್ಟ ವಿಷಯಗಳಿಗೂ ವಿಪರೀತ ಕೊರಗದೆ, ಸೊರಗದೆ ನಮ್ಮ ಯೋಗ್ಯತೆ ಎಷ್ಟಿದೆಯೋ ಅಷ್ಟಕ್ಕೇ ನಮ್ಮ ಬದುಕನ್ನು ನಾವು ಮಾರ್ಪಡಿಸುತ್ತಾ ಅಂತಹ ಸನ್ನಿವೇಶಗಳಿಗೆ ನಮ್ಮನು ನಾವು ಅಳವಡಿಸಿ ಕೊಂಡರೆ ಮಾತ್ರ ನಿಜವಾದ ನೆಮ್ಮದಿ, ಸಂತಸ ಪಡೆಯುತ್ತೇವೆ ಅನ್ನೊದಂತೂ ಸತ್ಯ.

ನಾವು ಕಾಣುವ ಕನಸುಗಳು ದೊಡ್ಡದಾಗಿದ್ದರೆ ಖಂಡಿತಾ ತಪ್ಪಿಲ್ಲ. ಆದರೆ, ಅದೆಲ್ಲ ನನಸಾಗಿಸುವ ಶಕ್ತಿ ಮನಸ್ಸಿನಲಿ ದೃಢನಿಶ್ಚಯ ನಮ್ಮಲಿದ್ದರೆ ಮಾತ್ರ ಆ ಕನಸಿಗೆ ಬೆಲೆ. ಇಲ್ಲದಿದ್ದರೆ ನಾವೂ ಸಹ ಅಂಬಾನಿಯಂತಾಗಬೇಕೆಂದು ಬಯಸಿದರೆ ಸಾಮಾನ್ಯವಾಗಿ ಜೀವಿಸುವ ಬದುಕೂ ನಮ್ಮಿಂದ ಕೈತಪ್ಪಿ ಹೋಗುವ ಸಂಭವವಿರುತ್ತದೆ.

ನಾವು ಬಾಳುವ ಬದುಕಲ್ಲಿ ಸದಾಕಾಲ ವಿಶ್ವಾಸವಿರಬೇಕು. ಆದರೆ, ಅತಿಯಾದ ಆತ್ಮವಿಶ್ವಾಸವಿರಬಾರದಷ್ಟೆ. ಅದಿದ್ದರೆ ಮಾತ್ರ ಬದುಕು ದುಸ್ತರವೆನಿಸುವುದು. ನಮ್ಮ ಬದುಕನು ಮತ್ತೊಬ್ಬರ ಬದುಕಿನೊಂದಿಗೆ ಹೋಲಿಸಿದಾಗಲೇ ಸಮಸ್ಯೆಯ ಉದ್ಭವವಾಗುತ್ತದೆ.

ಹಾಗೊಂದು ವೇಳೆ ಹೋಲಿಸಿಕೊಳ್ಳುವ ಸಂದರ್ಭ ಬಂದರೆ ನಮಗಿಂತ ಯಾರಿಗೆ ಕಮ್ಮಿಯಾದ ಅವಕಾಶ ಸಿಕ್ಕಿರುವುದೋ ಅಂತಹವರೊಡನೆ ಹೋಲಿಸಿಕೊಂಡಾಗ ನಮಗೆ ಆ ಭಗವಂತ ಇಷ್ಟಾದರೂ ಕರುಣಿಸಿದ್ದಾನೆ ಅನ್ನುವ ಸತ್ಯದ ಅರಿವಾಗಿ ಬದುಕು ಸಹನೀಯವೆನಿಸುವುದು. ನಾವು ಎದುರಿಸುವ ಬದುಕಿನಲಿ ಅದೆಷ್ಟೋ ರೀತಿಯಲಿ ಅಡೆತಡೆಗಳಿದ್ದರೂ, ಅವುಗಳನೆಲ್ಲಾ ನಿವಾರಿಸುವ ಶಕ್ತಿಯನ್ನು ಸಹ ಆ ಭಗವಂತನೇ ನಮಗೆ ಕೊಟ್ಟಿರುತ್ತಾನೆಂಬ ಸತ್ಯವನ್ನು ಮಾತ್ರ ನಾವು ಮರೆತಂತಿರುತ್ತೇವೆ.

ನಾವು ಯಾವಾಗಲೂ ಏನೊ ಬೇಡದ ಚಿಂತೆಗಳಲಿ, ಆ ಕ್ಷಣದಲಿ ನಿವಾರಣೆಯಾಗದ ಯೋಚನೆಗಳಲ್ಲಿ ಮುಳುಗಿ, ಬದುಕನ್ನು ಅದರಲಿರುವ ಅಮೂಲ್ಯವಾದ ಕ್ಷಣಗಳನ್ನು ಆಸ್ವಾದಿಸದೇ ಕಳೆದು ಬಿಡುತ್ತೇವೆ. ಮುಂದೆ ಇದರ ಅರಿವಾಗುವ ಕಾಲ ಬಂದಾಗ ನಾವು ಮೌಲ್ಯಯುತವಾದೊಂದು ನಿಧಿಯ ಕಳೆದು ಕೊಂಡೆವೆಂದು ಪರಿತಪಿಸಿ ಗೋಳಿಡುತ್ತೇವೆ. ಅದೆಂದಿಗೂ ನಮ್ಮಪಾಲಿಗೆ ನಿಲುಕದ ನಕ್ಷತ್ರವಾಗಿಬಿಡುತ್ತದೆ.

ಹಾಗಾಗಬಾರದೆಂದರೆ ನಮಗಿರುವ ಯೋಗ್ಯತೆಯನ್ನು ಪರಿಗಣಿಸಿ ನಮ್ಮ ಗುರಿಯ ತಲುಪುವ ನಿಶ್ಚಯ ಮಾಡಬೇಕಿದೆ. ಬದುಕಿನ ವಿಧವಿಧ ಮುಖಗಳು, ವಿವಿಧ ಮಜಲುಗಳು ನಮಗೆ ನಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿಯೇ ನಿತ್ಯ ಕಾಣಸಿಗುತ್ತದೆ. ಒಂದು ಉದ್ಯಾನವನದಲ್ಲಿ ನಡೆಯುತ್ತಾ ಗಮನಿಸುವುದಾದರೆ ಅರಳುತಿರುವ ಹೂವಿರಬಹುದು, ಕಿಲ-ಕಿಲನೆ ನಗುತ್ತಿರುವ ಮಗುವಿರಬಹುದು, ತಮ್ಮ ಬೊಚ್ಚುಬಾಯಿಯಲಿ ನಗುತಾ ಹರಟುವ ಇಳಿ ಪ್ರಾಯದವರ ಆ ಮುಗ್ಧ ನಗುವಿನಲಿ, ಯಾವುದೇ ಹಮ್ಮುಬಿಮ್ಮುಗಳಿಲ್ಲದೆ ಆಗಸದಲ್ಲಿ ಹಾರಾಡುವ ಹಕ್ಕಿಗಳ ಕಲರವವ ನೋಡುತ್ತಾ ನಮ್ಮ ಗೋಳನೆಲ್ಲ ಮರೆತು ನಾವು ಬಾಳುವ ಬದುಕನು ಸುಂದರಗೊಳಿಸುವ ಪ್ರಯತ್ನವನಾದರೂ ಮಾಡಬಹುದಲ್ಲವೇ. ಇನ್ನಾದರೂ ಕೊರಗದೇ, ಚಿಂತಿಸದೇ ಪ್ರತಿ ಕ್ಷಣವನ್ನು ಆಸ್ವಾದಿಸಿ ನಗುತ್ತಾ ಬದುಕಿಬಿಡಿ..ಏನಂತೀರಿ?

- ಸುಮನಾ ರಮಾನಂದ, ಕೊಯ್ಮತ್ತೂರು

ವಿಶ್ವ ಆರ್ಥಿಕತೆಯ ಕೇಂದ್ರಬಿಂದುವಾಗಿ ಅಮೆರಿಕನ್ ಡಾಲರ್ ಕಳೆದ ಏಳು ದಶಕಗಳ ಕಾಲ ತನ್ನ ಪ್ರಾಬಲ್ಯವನ್ನು ಮೆರೆದಿದೆ. ಎರಡನೇ ವಿಶ್ವಯುದ್ಧದ ನಂತರ ಅಂತರರಾಷ್ಟ್ರೀಯ ವ್ಯಾಪಾರ, ವಿದೇಶಿ ವಿನಿಮಯ ರಿಸರ್ವ್ ಮತ್ತು ಜಾಗತಿಕ ಹಣಕಾಸು ವ್ಯವಸ್ಥೆಯ ಬಹುತೇಕ ಚಟುವಟಿಕೆಗಳು ಡಾಲರನ್ನು ಕೇಂದ್ರವಾಗಿಸಿ ಅದರ ಸುತ್ತಲೂ ತನ್ನ ಪರಿಧಿಯ ಪ್ರಭಾವದ ಬಲೆಯನ್ನು ಹೆಣೆದು ಕೊಂಡಿದ್ದವು.

ಜಗತ್ತು ಡಾಲರ್‌ನಿಂದ ದೂರ ಸಾಗುತ್ತಿದೆಯೇ?

ಹಣಪ್ರಪಂಚ

ಭಾರತದ ವ್ಯಾಪಾರಿ, ಜರ್ಮನಿಯಲ್ಲಿರುವ ತನ್ನ ವ್ಯಾಪಾರ ಪೂರೈಕೆದಾರನಿಗೆ ಲಕ್ಷ ಯೂರೋ ಕಳುಹಿಸುವ ಹಿಂದೆ ವಿದೇಶಿ ವಿನಿಮಯ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೆಯೆಂದು ಅರಿತು ಕೊಂಡರೆ ಡಿಡಾಲರೀಕರಣದ ಅಡಿಪಾಯ ಅರ್ಥವಾಗುತ್ತದೆ. ಈ ಉದಾಹರಿತ ವ್ಯವಹಾರದಲ್ಲಿ, ಸ್ವಿ-ವಿದೇಶಿ ಹಣಕಾಸು ವ್ಯವಸ್ಥೆಯಲ್ಲಿ ರೂಪಾಯಿ ನೇರವಾಗಿ ಯೂರೋ ಆಗುವುದಿಲ್ಲ.

ಇದರ ಹಿಂದೆ ಬ್ಯಾಂಕುಗಳು, ವಿದೇಶಿ ವಿನಿಮಯ ಮಾರುಕಟ್ಟೆ ಮತ್ತು ಕೆಲವೊಮ್ಮೆ ಮಧ್ಯವರ್ತಿ ಬ್ಯಾಂಕುಗಳು ಕೆಲಸ ಮಾಡುತ್ತವೆ. ಮೊದಲಿಗೆ ರೂಪಾಯಿ ಡಾಲರ್ ಆಗಿ, ನಂತರ ಡಾಲರ್ ಯೂರೋವಾಗಿ ಪರಿವರ್ತಿತವಾಗುತ್ತದೆ. ಇಲ್ಲಿ ಅಮೆರಿಕದ ಬ್ಯಾಂಕುಗಳು ಮತ್ತು ಡಾಲರ್ ವ್ಯವಸ್ಥೆ ಪ್ರಮುಖ ಪಾತ್ರ ವಹಿಸುತ್ತವೆ. ಅಂದರೆ ಭಾರತೀಯ ಬ್ಯಾಂಕ್ ಆಮದುದಾರನ ಖಾತೆಯಲ್ಲಿರುವ ರೂಪಾಯಿಯ ಮೊಬಲಗನ್ನು ಉಪಯೋಗಿಸಿಕೊಂಡು ಅಮೇರಿಕದ ಡಾಲರ್ ಖರೀದಿಸುತ್ತದೆ. ನಂತರ ಈ ಡಾಲರನ್ನು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಯೂರೋ ಖರೀದಿಸಲು ಉಪಯೋಗಿಸಲಾಗುತ್ತದೆ.

ಖರೀದಿಸಿದ ಯೂರೋವನ್ನು ಭಾರತದ ಬ್ಯಾಂಕ್ ಜರ್ಮನಿಯ ರಫ್ತುದಾರನ ಖಾತೆಯಿರುವ ಬ್ಯಾಂಕ್‌ಗೆ ನೀಡುತ್ತದೆ. ಅಂತೆಯೇ ಜರ್ಮನಿಯ ಪೂರೈಕೆದಾರನು ಲಕ್ಷ ಯೂರೋ ತನ್ನ ಬ್ಯಾಂಕ್ ಮೂಲಕ ಪಡೆಯುತ್ತಾನೆ. ಇದು ಅಮೇರಿಕ ತನ್ನ ವ್ಯಾವಹಾರಿಕ ಪ್ರಾಬಲ್ಯದಿಂದ ಡಾಲರ್‌ನ ಮಹತ್ವದಿಂದ ಜಾಗತಿಕ ವ್ಯವಹಾರಗಳ ಮೇಲೆ ಪ್ರಭುತ್ವ ಸಾಧಿಸಿರುವ ವ್ಯವಸ್ಥೆ.

ವಿಶ್ವ ಆರ್ಥಿಕತೆಯ ಕೇಂದ್ರಬಿಂದುವಾಗಿ ಅಮೆರಿಕನ್ ಡಾಲರ್ ಕಳೆದ ಏಳು ದಶಕಗಳ ಕಾಲ ತನ್ನ ಪ್ರಾಬಲ್ಯವನ್ನು ಮೆರೆದಿದೆ. ಎರಡನೇ ವಿಶ್ವಯುದ್ಧದ ನಂತರ ಅಂತರರಾಷ್ಟ್ರೀಯ ವ್ಯಾಪಾರ, ವಿದೇಶಿ ವಿನಿಮಯ ರಿಸರ್ವ್ ಮತ್ತು ಜಾಗತಿಕ ಹಣಕಾಸು ವ್ಯವಸ್ಥೆಯ ಬಹುತೇಕ ಚಟುವಟಿಕೆಗಳು ಡಾಲರನ್ನು ಕೇಂದ್ರವಾಗಿಸಿ ಅದರ ಸುತ್ತಲೂ ತನ್ನ ಪರಿಧಿಯ ಪ್ರಭಾವದ ಬಲೆಯನ್ನು ಹೆಣೆದು ಕೊಂಡಿದ್ದವು. ಈಗೊಂದು ದಶಕದಿಂದ ಅಮೇರಿಕದ ಆರ್ಥಿಕ ನಿಬಂಧನೆಗಳನ್ನು ವಿದೇಶಾಂಗ ನೀತಿಯ ಸಾಧನವಾಗಿ ಬಳಸುತ್ತಿರುವುದು ಹಲವು ರಾಷ್ಟ್ರಗಳಲ್ಲಿ ಆತಂಕ ಮೂಡಿಸಿದೆ. ಇದರ ಜೊತೆಗೆ ಡಾಲರ್ ಮೌಲ್ಯದ ಕಡಿವಾಣವಿಲ್ಲದ ಏರಿಳಿತವು ಅಭಿವೃದ್ಧಿಶೀಲ ದೇಶಗಳ ಮೇಲೆ ನೇರ ಪರಿಣಾಮವನ್ನು ಬೀರುತ್ತಿದೆ.

ಡಾಲರ್ ಮೇಲಿನ ಅವಲಂಬನೆಯನ್ನು ಕಡಿತಗೊಳಿಸುವ ಹಾಗೂ ಸ್ಥಳೀಯ ಹಣಕಾಸನ್ನು ಸ್ಥಿರಗೊಳಿಸಲು ಬಹುಧ್ರುವೀಯ ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ನಿರ್ಮಿಸುವ ತುಡಿತವೂ ಸೇರಿ ಡಾಲರಿನ ಪ್ರಾಬಲ್ಯವನ್ನು ಹತ್ತಿಕ್ಕುವ ಪರಿಸರದ ಅವಶ್ಯಕತೆ ರೂಪುಗೊಳ್ಳುತ್ತಿದೆ. ಈ ಪರಿಸರವೇ ಡಿಡಾಲರೀಕರಣ.

ಡಿಡಾಲರೀಕರಣವನ್ನು ಸಂಕ್ಷಿಪ್ತವಾಗಿ ಅಥವಾ ಸಾರಾಂಶವಾಗಿ ತಿಳಿಸಬೇಕೆಂದರೆ - ಜಗತ್ತು ಡಾಲರ್ ಕೇಂದ್ರಿತ ಆರ್ಥಿಕ ವ್ಯವಸ್ಥೆಯಿಂದ ನಿಧಾನವಾಗಿ ಬಹುಕರೆನ್ಸಿ ಆಧಾರಿತ ಹೊಸ ಜಾಗತಿಕ ಹಣಕಾಸು ವ್ಯವಸ್ಥೆಯತ್ತ ಸಾಗುತ್ತಿರುವ ಪ್ರಕ್ರಿಯೆ. ಪಳಯುಳಿಕೆ ಇಂಧನ ಮಾರುಕಟ್ಟೆಯಲ್ಲಿಯೂ ಈ ಕರೆನ್ಸಿ ಪೆಟ್ರೋಡಾಲರ್ ಎಂಬ ಹೆಸರಿನಲ್ಲಿ ತನ್ನ ಕಬಂಧ ಬಾಹುವಿನ ಹಿಡಿತ ಸಾಧಿಸಿದೆ.

1970ರ ದಶಕದ ಆರಂಭದಲ್ಲಿ ಅಮೆರಿಕವು ಚಿನ್ನದ ಮಾನದಂಡವನ್ನು ತ್ಯಜಿಸಿತು. ಇದರಿಂದ ಡಾಲರ್‌ನ ಭವಿಷ್ಯದ ಬಗ್ಗೆ ಅನಿಶ್ಚಿತತೆ ಉಂಟಾಯಿತು. ಜಾಗತಿಕ ಮಟ್ಟದಲ್ಲಿ ಡಾಲರ್‌ಗೆ ಬೇಡಿಕೆಯನ್ನು ಉಳಿಸಿಕೊಳ್ಳಲು ಅಮೇರಿಕಾ, ಸೌದಿ ಅರೇಬಿಯಾ ಜೊತೆ ತಂತ್ರಾತ್ಮಕ ಪಾಲುದಾರಿಕೆಯನ್ನು ರೂಪಿಸಿತು.

ಈ ಒಪ್ಪಂದದ ಪ್ರಕಾರ ಸೌದಿ ತೈಲವನ್ನು ಅಮೆರಿಕನ್ ಡಾಲರ್‌ನಲ್ಲಿ ಬೆಲೆ ನಿಗದಿ ಪಡಿಸಿ ವ್ಯಾಪಾರ ಮಾಡಬೇಕಾಗಿತ್ತು. ಪ್ರತಿಯಾಗಿ ಅಮೆರಿಕವು ಸೌದಿ ಅರೇಬಿಯಾಗೆ ಭದ್ರತಾ ಭರವಸೆ ಮತ್ತು ಸೈನಿಕ ಬೆಂಬಲ ಒದಗಿಸಿತು. ಕಾಲಕ್ರಮೇಣ ಈ ವ್ಯವಸ್ಥೆ ಒಪೆಕ್ ದೇಶಗಳಾದ್ಯಂತ ವಿಸ್ತರಿಸಿತು. ಪರಿಣಾಮವಾಗಿ ಅಮೆರಿಕವು ಡಾಲರನ್ನು ಜಾಗತಿಕ ಮೀಸಲು ಕರೆನ್ಸಿಯಾಗಿ ಉಳಿಸಿಕೊಂಡು ಸಾರ್ವಭೌಮತ್ವ ಮೆರೆಯಲು ಸಾಧ್ಯವಾಯಿತು. ಆದರೆ, ಈಗಿನ 2026ರ ಇರಾನ್ ಯುದ್ಧ ಈ ಸಂಪೂರ್ಣ ವ್ಯವಸ್ಥೆಯಲ್ಲಿ ಬಿರುಕು ಮೂಡಿಸಿದೆ.

ಒಪೆಕ್ ದೇಶಗಳ ಮೇಲೆ ಇರಾನ್‌ನ ದಾಳಿ, ಹೊರ್ಮುಜ್ ದಿಗ್ಬಂಧನ ಹಾಗೂ ಇರಾನ್ ಯುದ್ಧದ ಮೇಲಿನ ಅಮೆರಿಕದ ಹಿಡಿತವಿಲ್ಲದ, ದಿಕ್ಕು ದಸೆಯಿಲ್ಲದ ನಡವಳಿಕೆ ಈ ಎಲ್ಲ ರಾಷ್ಟ್ರಗಳಲ್ಲೂ ಆತಂಕ ಮೂಡಿಸಿ ಅಮೆರಿಕದ ಮೇಲಿನ ವಿಶ್ವಾಸಕ್ಕೆ ಧಕ್ಕೆಯಾಗಿದೆ. ಇದೇ ವೇಳೆ, ಇರಾನ್ ನೊಂದಿಗೆ ವ್ಯಾಪಾರ

ನಡೆಸುವ ದೇಶಗಳ ಮೇಲೆ ದ್ವಿತೀಯ ಹಂತದ ನಿರ್ಬಂಧಗಳನ್ನು ವಿಧಿಸುವುದಾಗಿ ಅಮೆರಿಕ ನೀಡಿರುವ ಎಚ್ಚರಿಕೆ, ಅಮೆರಿಕವು ಡಾಲರ್ ಅನ್ನು ರಾಜಕೀಯ ಮತ್ತು ಆರ್ಥಿಕ ಆಯುಧವಾಗಿ ಬಳಸುತ್ತಿರುವುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ.

ಪ್ರಮುಖ ಪರಿಣಾಮವೆಂಬಂತೆ ಯುಎಈ ಮೇ 1, 2026ರಂದು ಅಧಿಕೃತವಾಗಿ ಒಪೆಕ್‌ನಿಂದ ಬೇರ್ಪಟ್ಟಿತು. ಅಮೆರಿಕಾದ ಜಾಗತಿಕ ಹಣಕಾಸು ಪ್ರಾಬಲ್ಯಕ್ಕೆ ಅರ್ಧ ಶತಮಾನಕ್ಕಿಂತ ಹೆಚ್ಚು ಕಾಲ ಆಧಾರವಾಗಿದ್ದ ಪೆಟ್ರೋಡಾಲರ್ ವ್ಯವಸ್ಥೆಯ ನಿಧಾನ ಕುಸಿತದ ಮತ್ತೊಂದು ಮಹತ್ವದ ಹಂತವಾಗಿ ಈ ನಿರ್ಗಮನ ಜಗತ್ತು ಕಂಡಿತು. 1973ರಲ್ಲಿ ತೈಲವು ಜಾಗತಿಕ ಆರ್ಥಿಕತೆಯನ್ನು ನಡುಗಿಸಿದ ರಾಜಕೀಯ ಆಯುಧವಾಗಿತ್ತು.

ಐವತ್ತು ವರ್ಷಗಳ ನಂತರ ಈ ಆಯುಧ ನಿಷ್ಪ್ರಯೋಜಕವಾಗುವ ಸಂಭಾವ್ಯತೆ ಗೋಚರಿಸುತ್ತಿದೆ. ರಷ್ಯಾ-ಉಕ್ರೇನ್ ಯುದ್ಧದ ಸಂದರ್ಭದಲ್ಲಿ ರಷ್ಯಾದ ಸರಕಾರಿ ಮತ್ತು ಖಾಸಗಿ ಆಸ್ತಿಗಳನ್ನು ಜಗತ್ತಿನಾದ್ಯಂತ ಸ್ಥಗಿತಗೊಳಿಸಿದ ಆರ್ಥಿಕ ನಿರ್ಬಂಧಗಳು, ಡಾಲರ್ ಆಧಾರಿತ ಹಣಕಾಸು ವ್ಯವಸ್ಥೆಯ ಮೇಲಿನ ಅತಿಯಾದ ಅವಲಂಬನೆಯ ಅಪಾಯಗಳನ್ನು ಜಗತ್ತಿಗೆ ತೋರಿಸಿಕೊಟ್ಟಿದೆ. ಈ ನಡುವೆ ಜಗತ್ತಿನ ಕೇಂದ್ರ ಬ್ಯಾಂಕುಗಳು ಚಿನ್ನದ ಖರೀದಿಯನ್ನು ಹೆಚ್ಚಿಸುತ್ತಿದ್ದು, ಅಮೆರಿಕದ ಖಜಾನೆ ಬಾಂಡ್‌ಗಳಲ್ಲಿನ ಹೂಡಿಕೆಯನ್ನು ಕ್ರಮೇಣ ಕಡಿಮೆ ಮಾಡುತ್ತಿವೆ.

ಭಾರತವು ತನ್ನ ವಿದೇಶಿ ವಿನಿಮಯ ಮೀಸಲು ನಿರ್ವಹಣೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಕೈಗೊಂಡಿದೆ. ಭಾರತೀಯ ರಿಸರ್ವ್ ಬ್ಯಾಂಕ್ ವಿದೇಶಿ ಭಂಡಾರಗಳಲ್ಲಿ ಸಂಗ್ರಹವಾಗಿದ್ದ ಸುಮಾರು 300 ಟನ್ ಗಳಷ್ಟು ಚಿನ್ನವನ್ನು ಮಾರ್ಚ್ 2023ರಿಂದ ಭಾರತಕ್ಕೆ ಮರಳಿ ತರುವುದರ ಜೊತೆಗೆ, ಅಂತರರಾಷ್ಟ್ರೀಯ ಮಾರುಕಟ್ಟೆಗಳಿಂದ ಗಣನೀಯ ಪ್ರಮಾಣದಲ್ಲಿ ಚಿನ್ನವನ್ನು ಖರೀದಿಸಿದೆ.

ಹಾಗೆಯೇ ತನ್ನಲ್ಲಿದ್ದ ಸುಮಾರು 21%ರಷ್ಟು (50 ಬಿಲಿಯನ್) ಅಮೆರಿಕದ ಟ್ರೆಷರಿ ಬಾಂಡ್‌ಗಳನ್ನು ಮಾರಾಟ ಮಾಡಿ ಮೀಸಲು ಆಸ್ತಿಗಳನ್ನು ಹೆಚ್ಚು ವೈವಿಧ್ಯಮಯಗೊಳಿಸುವ ಪ್ರಯತ್ನ ನಡೆಸಿದೆ. ಈ ಕ್ರಮಗಳು ಡಿಡಾಲರೀಕರಣದ ನೇರ ಘೋಷಣೆಯಾಗದಿದ್ದರೂ, ಜಾಗತಿಕ ಆರ್ಥಿಕ ಅನಿಶ್ಚಿತತೆ, ಭೂರಾಜಕೀಯ ಉದ್ವಿಗ್ನತೆ ಮತ್ತು ಸಂಭವನೀಯ ಆರ್ಥಿಕ ನಿರ್ಬಂಧಗಳ ಅಪಾಯದ ನಡುವೆ ಭಾರತದ ವಿದೇಶಿ ವಿನಿಮಯ ಮೀಸಲುಗಳನ್ನು ಹೆಚ್ಚು ಸುರಕ್ಷಿತ, ಸ್ವಾಯತ್ತ ಮತ್ತು ಸ್ಥಿರವಾಗಿಡುವ ಕಾರ್ಯತಂತ್ರ. ಚಿನ್ನವನ್ನು ಯಾವುದೇ ವಿದೇಶಿ ಸರಕಾರ ಏಕಪಕ್ಷೀಯವಾಗಿ ಸ್ಥಗಿತಗೊಳಿಸಲು ಸಾಧ್ಯವಿಲ್ಲ ಎಂಬ ಕಾರಣದಿಂದ, ಅದು ಕೇಂದ್ರ ಬ್ಯಾಂಕುಗಳಿಗೆ ಮತ್ತೊಮ್ಮೆ ವಿಶ್ವಾಸಾರ್ಹ ಮೀಸಲು ಆಸ್ತಿಯಾಗಿ ಹೊರಹೊಮ್ಮುತ್ತಿದೆ.

ಚೀನಾ ಹಾಗೂ ಜಪಾನ್ ದೇಶಗಳೂ ಇದೇ ರೀತಿಯ ಕ್ರಮಗಳನ್ನು ಇನ್ನೂ ಬೃಹತ್ ಪ್ರಮಾಣದಲ್ಲಿ ಕೈಗೊಂಡಿವೆ. ಡಿಡಾಲರೀಕರಣವು ವೇಗ ಪಡೆಯಬೇಕಾದರೆ ರಾಷ್ಟ್ರಗಳು ಪರ್ಯಾಯ ಪಾವತಿ ವ್ಯವಸ್ಥೆಗಳನ್ನು ನಿರ್ಮಿಸಲೇಬೇಕಾಗಿದೆ. ಪ್ರಭಾವೀ ರಾಷ್ಟ್ರಗಳ ಸದಸ್ಯತ್ವ ಹೊಂದಿರುವ ಬ್ರಿಕ್ಸ್ ಒಕ್ಕೂಟ (ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದ.ಆಫ್ರಿಕಾ ಮತ್ತಿತರ ಆರು ರಾಷ್ಟ್ರಗಳು) ಅತ್ಯಂತ ಆಶಾದಾಯಕವಾದ ತಮ್ಮದೇ ಕರೆನ್ಸಿಯನ್ನು ಪ್ರಸ್ತುತಪಡಿಸುವ ಹಂತದಲ್ಲಿದೆ.

ಬ್ರಿಕ್ಸ್ ಪರಿಗಣಿಸುತ್ತಿರುವ ಭವಿಷ್ಯದ ಕರೆನ್ಸಿಯ ಪ್ರಮುಖ ವೈಶಿಷ್ಟ್ಯವೆಂದರೆ ಅದು ಕೇವಲ ಸರಕಾರದ ಭರವಸೆಯ ಮೇಲೆ ಅವಲಂಬಿತ ಫಿಯಾಟ್ ಕರೆನ್ಸಿಯಲ್ಲ. ಚಿನ್ನ, ತೈಲ, ಅನಿಲ, ಅಪರೂಪದ ಖನಿಜಗಳು ಮತ್ತು ಇತರ ನೈಜ ಆಸ್ತಿಗಳಿಂದ ಬೆಂಬಲಿತವಾಗಿರುವ ಹಣದ ವ್ಯವಸ್ಥೆ. ಅಮೆರಿಕನ್ ಡಾಲರ್‌ನ ಮೌಲ್ಯವು ಮುಖ್ಯವಾಗಿ ಅಮೆರಿಕದ ಆರ್ಥಿಕ ಶಕ್ತಿ ಮತ್ತು ಜಾಗತಿಕ ವಿಶ್ವಾಸದ ಮೇಲೆ ಅವಲಂಬಿತವಾಗಿದ್ದರೆ, ಬ್ರಿಕ್ಸ್ ಕರೆನ್ಸಿಯು ವಾಸ್ತವಿಕ ಸಂಪತ್ತಿನ ಆಧಾರವನ್ನು ಹೊಂದಿರುವುದರಿಂದ ಹೆಚ್ಚಿನ ಸ್ಥಿರತೆಯನ್ನು ಒದಗಿಸುವುದರಲ್ಲಿ ಸಂಶಯವಿಲ್ಲ.

ಜಗತ್ತಿನ ಚಿನ್ನದ ಸಂಗ್ರಹ, ತೈಲ ಉತ್ಪಾದನೆ, ಅಪರೂಪದ ಖನಿಜಗಳು ಮತ್ತು ಕೃಷಿ ಉತ್ಪನ್ನಗಳ ಮಹತ್ತರ ಭಾಗ ಬ್ರಿಕ್ಸ್ ರಾಷ್ಟ್ರಗಳಲ್ಲಿಯೇ ಇರುವುದರಿಂದ, ಈ ಸಂಪನ್ಮೂಲಗಳ ಬೆಂಬಲದೊಂದಿಗೆ ರೂಪುಗೊಳ್ಳುವ ಕರೆನ್ಸಿಯು ಡಾಲರ್ ಪ್ರಾಬಲ್ಯಕ್ಕೆ ಪರ್ಯಾಯವಾಗಿ ಹೊರಹೊಮ್ಮುವ ಸಾಮರ್ಥ್ಯ ಹೊಂದಿದೆ.

ಹಾಗೆಯೇ ಜಾಗತಿಕ ಪಾವತಿ ವ್ಯವಸ್ಥೆಯ ಮೇಲಿನ ನಿಯಂತ್ರಣಕ್ಕಾಗಿ ನಡೆಯುತ್ತಿರುವ ಸ್ಪರ್ಧೆಯಲ್ಲಿ ಬ್ರೆಜಿಲ್ ದೇಶವು, ಬ್ರಿಕ್ಸ್ ಬ್ರಿಡ್ಜ್ ವ್ಯವಸ್ಥೆಯನ್ನು ಸಕ್ರಿಯಗೊಳಿಸುವ ಬಗ್ಗೆ ಚಿಂತನೆ ನಡೆಸುತ್ತಿದೆ. ಈ ವ್ಯವಸ್ಥೆಯ ಮೂಲಕ ಅಮೆರಿಕದ ಬ್ಯಾಂಕುಗಳ ಪಾಲ್ಗೊಳ್ಳುವಿಕೆ ಇಲ್ಲದೆ ಗಡಿ ದಾಟಿ ವ್ಯಾಪಾರ ಪಾವತಿಗಳನ್ನು ನಡೆಸಲು ಸಾಧ್ಯವಾಗುತ್ತದೆ. ಇದರ ಜೊತೆಗೆ ಬ್ರಿಕ್ಸ್ ಪೇ ಎಂಬ ವ್ಯವಸ್ಥೆಯು ಬ್ಲಾಕ್‌ಚೈನ್ ತಂತ್ರಜ್ಞಾನ ಆಧಾರಿತ ವಿಕೇಂದ್ರೀಕೃತ ಗಡಿದಾಟಿ ಸಂದೇಶ ವಿನಿಮಯ ವ್ಯವಸ್ಥೆಯನ್ನು ಒಳ

ಬೇಲೂರು ಗುಡಿಸಲು ಮುಕ್ತ - ಶೀಘ್ರವೇ ಅರ್ಹರಿಗೆ ನಿವೇಶನ

• ಪ್ರಜೋದಯ ವರದಿ

ಬೇಲೂರು: ಪಟ್ಟಣದ ಜೂನಿಯರ್ ಕಾಲೇಜು ಹಿಂಭಾಗದಲ್ಲಿರುವ ನಿವೇಶನ ರಹಿತ ಗುಡಿಸಲು ನಿವಾಸಿಗಳಿಗೆ ಮೊದಲ ಹಂತದಲ್ಲಿ ಶೀಘ್ರವೇ ನಿವೇಶನ ನೀಡಲು ಬದ್ಧವಾಗಿದ್ದು, ನಿವೇಶನ ರಹಿತ ಪೌರ ಕಾರ್ಮಿಕರಿಗೆ ಮತ್ತು ಪತ್ರಕರ್ತರಿಗೆ ನೀಡಲಾಗುತ್ತದೆ ಎಂದು ಬೇಲೂರು ಶಾಸಕ ಹೆಚ್.ಕೆ.ಸುರೇಶ್ ಅವರು ಮಾಹಿತಿ ನೀಡಿದರು.

ಪಟ್ಟಣದ ಪುರಸಭಾ ವೇಲಾಪುರಿ ಸಭಾಂಗಣದಲ್ಲಿ ಆಶ್ರಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಳೆದ ಎರಡು ದಶಕದಿಂದ ಜೂನಿಯರ್ ಕಾಲೇಜು ಹಿಂಭಾಗದಲ್ಲಿ ಅನಧಿಕೃತ ಗುಡಿಸಲು ನಿರ್ಮಿಸಿಕೊಂಡು ಪಟ್ಟಣದ ಸೌಂದರ್ಯಕ್ಕೆ ಧಕ್ಕೆ ತರುತ್ತದೆ ಮತ್ತು ಜೂನಿಯರ್ ಕಾಲೇಜು ಆಟದ ಮೈದಾನಕ್ಕೆ ತೊಂದರೆಯಾಗುತ್ತದೆ ಎಂದು ವ್ಯಾಪಕ ದೂರು ಬಂದ ಹಿನ್ನೆಲೆಯಲ್ಲಿ ಅವರಿಗೆ ಸೂಕ್ತ ನಿವೇಶನ ನೀಡಬೇಕೆಂದು ಆಶ್ರಯ ಸಮಿತಿ ನಿರ್ಧಾರ ಮಾಡಲಾಗಿದೆ. ರಾಯಪುರ ಗ್ರಾಮದ ಬಳಿ ಸದ್ಯ 100 ನಿವೇಶನಗಳಿದ್ದು, ಮೊದಲ ಆದ್ಯತೆಯಲ್ಲಿ ನಿವೇಶನರಹಿತ ಗುಡಿಸಲು ನಿವಾಸಿಗಳಿಗೆ, ನಿವೇಶನ ರಹಿತರಾದ ಪೌರಕಾರ್ಮಿಕರಿಗೆ ಮತ್ತು ಪತ್ರಕರ್ತರಿಗೆ ನೀಡಲು ಸಮಿತಿ ಮುಂದಾಗಿದೆ ಎಂದರು.

ಜೂನಿಯರ್ ಕಾಲೇಜು ಹಿಂಭಾಗದಲ್ಲಿ ಸದ್ಯ 55 ಗುಡಿಸಲು ಕುಟುಂಬ ಇರುವ ಬಗ್ಗೆ ತಹಸೀಲ್ದಾರ್ ಪರಿಶೀಲನೆ ನಡೆಸಿ ಗುರುತಿಸಿದ್ದಾರೆ. ಅವರಲ್ಲಿ ಅರ್ಹರಿಗೆ ಕಾನೂನಾತ್ಮಕವಾಗಿ ನಿವೇಶನ ಹಂಚಿಕೆ ಮಾಡಲು ತಹಸೀಲ್ದಾರ್ ಅವರಿಗೆ ಪುರಸಭಾ ಸಂಪೂರ್ಣ ಸಹಕಾರ ನೀಡಬೇಕು ಮತ್ತು ಈಗಾಗಲೇ ರಾಯಪುರ ಬಳಿ 100 ನಿವೇಶನಗಳಿಗೆ ರಸ್ತೆ, ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಮೂಲ ಸೌಲಭ್ಯ ಕಲ್ಪಿಸಲಾಗುತ್ತದೆ. ಯಾವ ಕಾರಣಕ್ಕೂ ಅನರ್ಹರಿಗೆ ನಿವೇಶನ ನೀಡಬಾರದು ಆ ಕಾರಣದಿಂದ ತಾಲ್ಲೂಕು ಆಡಳಿತ ಮತ್ತು ಪುರಸಭೆ ಅತ್ಯಂತ ಜಾಗೃತಿಯಿಂದ ಕೆಲಸ ಮಾಡಬೇಕು, ಮುಂದಿನ ಸಭೆಯನ್ನು ಜೂನಿಯರ್ ಕಾಲೇಜು ಆವರಣದಲ್ಲಿ ಸೂಕ್ತ ಫಲಾನುಭವಿಗಳನ್ನು ಸಾರ್ವಜನಿಕವಾಗಿ ಗುರುತಿಸಲಾಗಿದೆ. ಇದರಲ್ಲಿ ಯಾವುದೇ ಜಾತಿ, ಧರ್ಮ, ರಾಜಕೀಯ ಒತ್ತಡವಿಲ್ಲದೆ ಪಾರದರ್ಶಕದಿಂದ ನಿವೇಶನ ನೀಡಲಾಗುತ್ತದೆ ಎಂದು ಸ್ಪಷ್ಟ ಸಂದೇಶ ನೀಡಿದರು.

ತಹಸೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು ಮಾತನಾಡಿ, ಪಟ್ಟಣದ ಜೂನಿಯರ್ ಕಾಲೇಜು ಹಿಂಭಾಗದಲ್ಲಿ 55 ಗುಡಿಸಲು ನಿವಾಸಿಗಳನ್ನು ಗುರುತಿಸಲಾಗಿದೆ. ಆಶ್ರಯ ನಿವೇಶನ ನೀಡಲು ಸಂದರ್ಭದಲ್ಲಿ ಷರತ್ತುಗಳನ್ನು ಅನ್ವಯದ ಮೂಲಕ ನೀಡಲಾಗುತ್ತದೆ. ಅಲ್ಲದೆ ಇಲ್ಲಿನ ಜೂನಿಯರ್ ಕಾಲೇಜು ಹಿಂಭಾಗದಲ್ಲಿನ ಗುಡಿಸಲು ನಿವಾಸಿಗಳು ಸ್ವಯಂ ಪ್ರೇರಿತರಿಂದ ಗುಡಿಸಲು ತೆರವು ಮಾಡುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸದ್ಯ 93 ನಿವೇಶನಗಳನ್ನು ಮೊದಲಿಗೆ ಗುಡಿಸಲು ನಿವಾಸಿಗಳಿಗೆ ಅಧ್ಯತೆ ನೀಡಲಾಗುತ್ತದೆ. ಇನ್ನೂ ಹದಿನೈದು ದಿನಗಳಲ್ಲಿ ಸೂಕ್ತ ದಾಖಲಾತಿ ಮತ್ತು ಮೂಲ ಸೌಲಭ್ಯಗಳನ್ನು ಕಲ್ಪಿಸಲು ಮುಂದಾಗಿದೆ ಎಂದು ಮಾಹಿತಿ ನೀಡಿದರು.

ಬೇಲೂರು ಪುರಸಭಾ ಅಧ್ಯಕ್ಷ ಅಕ್ರಂ ಶರೀಫ್ ಮಾತನಾಡಿ, ಕಳೆದ ಇಪ್ಪತ್ತು ವರ್ಷಗಳಿಂದ ಜೂನಿಯರ್ ಕಾಲೇಜು ಆವರಣದಲ್ಲಿ ಗುಡಿಸಲು ಇರುವ ಕಾರಣದಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗುತ್ತದೆ. ಆ ಕಾರಣದಿಂದ ಶಾಸಕ ಹೆಚ್.ಕೆ. ಸುರೇಶ್ ಅವರು ಆಶ್ರಯ ಸಮಿತಿ ಸಭೆಯನ್ನು ತ್ವರಿತಗತಿಯಲ್ಲಿ ನಡೆಸುವ ಮೂಲಕ ಅರ್ಹರಿಗೆ ನಿವೇಶನಗಳನ್ನು ನಮ್ಮ ಕಾಲದಲ್ಲಿ ನೀಡುತ್ತಿರುವುದು ನಮಗೆ ಅತೀವ ಸಂತೋಷವಾಗಿದೆ. ಈ ಹಿನ್ನೆಲೆಯಲ್ಲಿ ಶಾಸಕರಿಗೆ ಪುರಸಭೆಯಿಂದ ವಂದನೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಬಸವರಾಜು ಶಿವ್ಹಾವಿ, ಆಶ್ರಯ ಸಮಿತಿ ಸದಸ್ಯರಾದ ಇಕ್ಬಾಲ್, ಹರೀಶ್, ಡಿಂಪಲ್ ರಾಣಿ, ನಾಗರಾಜು, ಚೆಸ್ಕಾಂ ಇಒ ಬಸವರಾಜು ಹಾಜರಿದ್ದರು.

ಪರಿಸರದೊಂದಿಗೆ ಬಾಂಧವ್ಯ ಬೆಳೆಸಿಕೊಳ್ಳಿ: ಯತೀಶ್ವರ್

• ಪ್ರಜೋದಯ ವರದಿ

ಹಾಸನ: ಮಾನವ ಬದುಕಿಗೆ ಪರಿಸರ ಅತ್ಯಂತ ಅವಶ್ಯಕವಾಗಿದ್ದು, ಪರಿಸರದೊಂದಿಗೆ ಪ್ರೀತಿಯ ಬಾಂಧವ್ಯವನ್ನು ಬೆಳೆಸಿಕೊಳ್ಳಬೇಕೆಂದು ಎವಿಕೆ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಸಿ. ಯತೀಶ್ವರ್ ಅವರು ಹೇಳಿದರು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಗರದ ಎ.ವಿ.ಕಾಂತಮ್ಮ ಮಹಿಳಾ ಕಾಲೇಜಿನಲ್ಲಿ ಶುಕ್ರವಾರ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಕೃತಿಗೆ ಪೂರಕವಾದ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವುದರ ಮೂಲಕ ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕೆಂದು ಹೇಳಿದ ಅವರು, ಮನುಷ್ಯನ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಪರಿಸರವಿದೆಯೇ ವಿನಃ ದುರಾಸೆಗಳನ್ನು ಈಡೇರಿಸುವುದಕ್ಕಲ್ಲ ಎಂಬ ಮಹಾತ್ಮ ಗಾಂಧೀಜಿಯ ಸಂದೇಶವನ್ನು ಸ್ಮರಿಸಿಕೊಂಡರು.

ಪರಿಸರದೊಂದಿಗೆ ಬದುಕನ್ನು ಹಂಚಿಕೊಂಡಿರುವ ಪ್ರತಿಯೊಂದು ಜೀವ ಸಂಕುಲದ ಅಸ್ತಿತ್ವವನ್ನು ಉಳಿಸುವ ಅಗತ್ಯವಿದೆ. ಪರಿಸರ ಸಮತೋಲನ ಕಾಪಾಡುವಲ್ಲಿ ಯುವ ಜನತೆ ಪ್ರಮುಖ ಪಾತ್ರವಹಿಸಬೇಕಿದ್ದು, ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ರೋಗ- ರುಜಿನಗಳನ್ನು ತಡೆಗಟ್ಟಬೇಕು. ಇದರಿಂದ ನಮ್ಮ ಮುಂದಿನ ಪೀಳಿಗೆಗೂ ಆರೋಗ್ಯ ಕಲ್ಪಿಸಿದಂತಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ವ್ಯವಸ್ಥಾಪಕ ಹೆಚ್.ಎನ್.ಶ್ರೀಲಕ್ಷ್ಮಿ, ವಾಣಿಜ್ಯಶಾಸ್ತ್ರ ವಿಭಾಗದ ಡಾ. ಪಾಪಯ್ಯ, ಗ್ರಂಥಪಾಲಕಿ ಡಾ.ಪಿ. ಆಶಾ, ಉಪನ್ಯಾಸಕ ಭಾಸ್ಕರಾಚಾರಿ, ಕಚೇರಿ ಸಿಬ್ಬಂದಿ, ವಿದ್ಯಾರ್ಥಿನಿಯರು ಭಾಗವಹಿಸಿ ಕಾಲೇಜು ಆವರಣದಲ್ಲಿ ಸಸಿಗಳನ್ನು ನೆಟ್ಟರು.

ಆಲೂರು-ಭೈರಾಪುರ ದ್ವಿಪಥ ರಸ್ತೆ ಶೀಘ್ರ ಪೂರ್ಣ

• ಪ್ರಜೋದಯ ವರದಿ

ಆಲೂರು: ಪಟ್ಟಣದಿಂದ ಭೈರಾಪುರದವರೆಗೆ ದ್ವಿಪಥ ಡಾಂಬರ್ ರಸ್ತೆ ಕಾಮಗಾರಿಯನ್ನು ಶನಿವಾರ ಶಾಸಕ ಸಿಮೆಂಟ್ ಮಂಜು ಅವರು ಪರಿಶೀಲನೆ ನಡೆಸಿದರು.

ದ್ವಿಪಥ ರಸ್ತೆ ಕಾಮಗಾರಿ ಭರದಿಂದ ಸಾಗುತ್ತಿದೆ. ಈಗಾಗಲೆ ರಸ್ತೆಗೆ ಅಡಚಣೆಯಾಗಿದ್ದ ಮರಗಳನ್ನು ತೆರವು ಮಾಡಿ, ರಸ್ತೆ ಮದ್ಯೆ ಡಿವೈಡರ್ ಅಳವಡಿಸಿ ರಸ್ತೆ ವಿಸ್ತರಣೆ ಕಾಮಗಾರಿ ಮುಗಿದಿದೆ. ಆಲೂರಿನಿಂದ ಭೈರಾಪುರದವರೆಗೆ 1.4 ಕಿ.ಮೀ. ರಸ್ತೆ ಡಾಂಬರು ಮಾಡಲಾಗುತ್ತಿದೆ. ರಸ್ತೆ ವಿಸ್ತರಣೆಗಾಗಿ ಭೈರಾಪುರ ಸಂಪರ್ಕಿಸುವ ಮೊದಲು ಸುಮಾರು 200 ಮೀ. ವ್ಯಾಪ್ತಿಯಲ್ಲಿ ಭಾರಿ ಗಾತ್ರದ ಮರಗಳನ್ನು ತೆರವು ಮಾಡಿರುವುದರಿಂದ, ರಸ್ತೆ ಮೇಲೆ ಹಾಕಿರುವ ಮಣ್ಣು ಕುಸಿಯುತ್ತಿದೆ. ಈಗ ಈ ಸ್ಥಳದಲ್ಲಿ ಡಾಂಬರು ಹಾಕಿದರೆ ಪ್ರಯೋಜನವಾಗುವುದಿಲ್ಲ ಎಂದರು.

ಮಳೆಗಾಲ ಸಮೀಪಿಸಿರುವುದರಿಂದ ಸದ್ಯ ಪಟ್ಟಣದಿಂದ 1.2 ಕಿ.ಮೀ. ರಸ್ತೆಗೆ ಡಾಂಬರು ಹಾಕಲಾಗುತ್ತಿದೆ. ಮುಂದಿನ ದಿನಗಳಲ್ಲಿ 200 ಮೀ. ರಸ್ತೆಗೆ ಡಾಂಬರು ಹಾಕಲಾಗುವುದು. ರಸ್ತೆ ಮೇಲೆ ಬಿದ್ದ ನೀರು ನಿಲ್ಲದೆ ಸರಾಗವಾಗಿ ಹೊರಗೆ ಹರಿಯುವಂತೆ ಗುಣಮಟ್ಟದ ಕಾಮಗಾರಿ ಮಾಡಲು ಇಂಜಿನಿಯರ್ ರವರಿಗೆ ಸೂಚಿಸಿದ್ದೇನೆ. ಆತಿ ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳ್ಳುವುದು ಎಂದರು.

ಸಹಾಯಕ ಇಂಜಿನಿಯರ್ ಮಧು ಹಾಜರಿದ್ದರು.

ಆಲೂರಿನಿಂದ ಸಕಲೇಶಪುರ, ಕೊಡ್ಲಿಪೇಟೆ ಮತ್ತು ರಾಷ್ಟ್ರೀಯ ಹೆದ್ದಾರಿ ರಸ್ತೆಗೆ ಸಂಪರ್ಕ ಕಲ್ಪಿಸುವ ಭೈರಾಪುರದವರೆಗೆ ಏಕಮುಖ ಸಂಚಾರ ರಸ್ತೆ ಮಾತ್ರ ಇತ್ತು.

ಎಫ್‌ಐಡಿ ಆಧಾರದಲ್ಲಿಯೇ ರಸಗೊಬ್ಬರ ವಿತರಿಸಿ

ಮಾರಾಟಗಾರರಿಗೆ ಉಪ ಕೃಷಿ ನಿರ್ದೇಶಕ ಪ್ರಭಾಕರ್ ಸೂಚನೆ

• ಪ್ರಜೋದಯ ವರದಿ

ಸಕಲೇಶಪುರ: ಆಧಾರ್‌ಗೆ ಜೋಡಣೆಗೊಂಡಿರುವ ಎಫ್‌ಐಡಿ ವ್ಯವಸ್ಥೆಯಿಂದ ರೈತರು ಯಾವುದೇ ಅಧಿಕೃತ ಮಾರಾಟ ಕೇಂದ್ರದಲ್ಲಿ ರಸಗೊಬ್ಬರ ಖರೀದಿಸಿದರೂ ವಿವರ ತಂತ್ರಾಂಶದಲ್ಲಿ ದಾಖಲಾಗಲಿದೆ. ಇದರಿಂದ ದುರುಪಯೋಗದ ತಡೆಯಲು ನೆರವಾಗಲಿದೆ ಎಂದು ಉಪ ಕೃಷಿ ನಿರ್ದೇಶಕ ಪ್ರಭಾಕರ್ ಅವರು ಹೇಳಿದರು.

ತಾಲ್ಲೂಕಿನ ಕೃಷಿ ಇಲಾಖೆಯಲ್ಲಿ ಯೂರಿಯಾ ಹಾಗು ಇತರೆ ರಸಗೊಬ್ಬರಗಳ ವಿತರಣೆಯನ್ನು ಪಾರದರ್ಶಕ ಮತ್ತು ನಿಯಮಬದ್ಧವಾಗಿ ನಿರ್ವಹಿಸುವ ಉದ್ದೇಶದಿಂದ ರಸಗೊಬ್ಬರ ಮಾರಾಟಗಾರರು ಹಾಗು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದ ಅವರು, ಯೂರಿಯಾ ರಸಗೊಬ್ಬರವನ್ನು ಕರ್ನಾಟಕ ಕೃಷಿ ಇಲಾಖೆಯ ಕೆ-ಕಿಸಾನ್ ತಂತ್ರಾಂಶದ ಮೂಲಕ ರೈತರ ಎಫ್‌ಐಡಿ ಆಧಾರದಲ್ಲಿಯೇ ವಿತರಿಸಬೇಕೆಂದು ಸೂಚಿಸಿದರು.

ಸಹಾಯಕ ಕೃಷಿ ನಿರ್ದೇಶಕ ಪ್ರಕಾಶ್‌ಕುಮಾರ್ ಅವರು ಮಾತನಾಡಿ, ರಸಗೊಬ್ಬರ ಮಾರಾಟಗಾರರು ವಿತರಣೆ ಮತ್ತು ದಾಸ್ತಾನು ವಿವರಗಳನ್ನು ನಿಯಮಿತವಾಗಿ ದಾಖಲಿಸುವುದರ ಜೊತೆಗೆ, ಕೇಂದ್ರ ಸರ್ಕಾರದ ಪಾಯಿಂಟ್ ಆಫ್ ಸೇಲ್ ತಂತ್ರಾಂಶದಲ್ಲಿ ಎಲ್ಲಾ ವಹಿವಾಟುಗಳನ್ನು ದಾಖಲಿಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.

ಸರ್ಕಾರದ ಸಹಾಯಧನ ಹೊರತು ಪಡಿಸಿ ರೈತರು ಪಾವತಿಸಬೇಕಾದ ಮೊತ್ತವನ್ನು ನಾಮಫಲಕದಲ್ಲಿ ಸ್ಪಷ್ಟವಾಗಿ ಪ್ರದರ್ಶಿಸಬೇಕು. ಅಧಿಕೃತ ಪರವಾನಿಗೆ ಪಡೆದ ಮಾರಾಟಗಾರರಿಂದ ಮಾತ್ರ ರಸಗೊಬ್ಬರ ಖರೀದಿಸಬೇಕು. ಅನಧಿಕೃತ ಮಾರಾಟ ಕಂಡು ಬಂದರೆ ರಸಗೊಬ್ಬರ ನಿಯಂತ್ರಣ ಆದೇಶ ಹಾಗೂ ಅಗತ್ಯ ವಸ್ತುಗಳ ಕಾಯ್ದೆಯಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ತಾಲ್ಲೂಕಿನಲ್ಲಿ ಒಟ್ಟು 42 ಪರವಾನಿಗೆ ಪಡೆದ ರಸಗೊಬ್ಬರ ಮಾರಾಟಗಾರರಿದ್ದು, 31 ಮಂದಿ ಸಕ್ರಿಯರಾಗಿದ್ದಾರೆ. 2025-26ನೇ ಸಾಲಿನಲ್ಲಿ 38,607 ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆ ನಡೆದಿದ್ದು, ಅದರಲ್ಲಿ 7,713 ಮೆಟ್ರಿಕ್ ಟನ್ ಯೂರಿಯಾ ಸೇರಿದೆ ಎಂದರು.

ಹೆಚ್ಚಿನ ಮಳೆಯ ಪರಿಣಾಮ ಮಣ್ಣಿನ ರಸಸಾರ ಕುಸಿಯುತ್ತಿರುವುದರಿಂದ ರೈತರು ಮಣ್ಣು ಪರೀಕ್ಷೆ ಆಧರಿಸಿ ವೈಜ್ಞಾನಿಕ ಶಿಫಾರಸ್ಸಿನಂತೆ ರಸಗೊಬ್ಬರ ಬಳಕೆ ಮಾಡಬೇಕು ಎಂದು ಅವರು ಹೇಳಿದರು.

ಕೃಷಿ ಇಲಾಖೆಯ ಜಾಗೃತಿ ದಳದ ಸಹಾಯಕ ಕೃಷಿ ನಿರ್ದೇಶಕ ಯೋಗಾನಂದ ಅವರು ಕೆ-ಕಿಸಾನ್ ತಂತ್ರಾಂಶದಲ್ಲಿ ಯೂರಿಯಾ ವಿತರಣೆ ದಾಖಲಿಸುವ ಕುರಿತು ಮಾರಾಟಗಾರರಿಗೆ ತರಬೇತಿ ನೀಡಿದರು.

ಕಾರ್ಯಕ್ರಮದಲ್ಲಿ ತಾಂತ್ರಿಕ ಅಧಿಕಾರಿ ಅಜಿತ್ ಪ್ರಸಾದ್, ಕೃಷಿ ಅಧಿಕಾರಿ ಕೇಶವಮೂರ್ತಿ, ತಾಂತ್ರಿಕ ವ್ಯವಸ್ಥಾಪಕ ಶ್ರವಣ್, ರಸಗೊಬ್ಬರ ಮಾರಾಟಗಾರರ ಸಂಘದ ಅಧ್ಯಕ್ಷ ಅಜಿತ್ ಹಾಗು ಸಂಘದ ಪದಾಧಿಕಾರಿಗಳು, ಮಾರಾಟಗಾರರು ಮತ್ತು ಸಹಕಾರ ಸಂಘಗಳ ಅಧಿಕಾರಿಗಳು ಇದ್ದರು.

ಅರೇಹಳ್ಳಿಯಲ್ಲಿ ಮತ್ತೆ ರಸ್ತೆ ಬದಿ ತ್ಯಾಜ್ಯದ ರಾಶಿ

ಶುಚಿತ್ವ ಕಾಪಾಡಲು ಸಾರ್ವಜನಿಕರ ಸಹಕಾರ ಅಗತ್ಯ: ಸಂಕಪ್ಪ

• ಪ್ರಜೋದಯ ವರದಿ

ಅರೇಹಳ್ಳಿ: ಗ್ರಾಮ ಪಂಚಾಯಿತಿಯು ಮನೆ, ಮನೆಗೆ ತ್ಯಾಜ್ಯ ಸಂಗ್ರಹಣೆ ವ್ಯವಸ್ಥೆ ಕಲ್ಪಿಸಿದ್ದರೂ ಕೆಲವರು ರಸ್ತೆ ಬದಿಯಲ್ಲಿ ಕಸ ಸುರಿಯುತ್ತಿರುವುದು ಪಟ್ಟಣದ ಶುಚಿತ್ವಕ್ಕೆ ಧಕ್ಕೆ ಉಂಟುಮಾಡುತ್ತಿದೆ ಎಂದು ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂಕಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗ್ರಾಮ ಪಂಚಾಯಿತಿಯು ಪ್ರತಿ ಮನೆಗೆ ಎರಡು ಪ್ಲಾಸ್ಟಿಕ್ ಬಕೆಟ್‌ಗಳನ್ನು ವಿತರಿಸಿದ್ದು, ವಾಹನಗಳ ಮೂಲಕ ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಮಾಡುತ್ತಿದೆ. ತ್ಯಾಜ್ಯ ವಿಲೇವಾರಿಗಾಗಿ ಪ್ರತ್ಯೇಕ ಸ್ಥಳ ಹಾಗು ಘಟಕವನ್ನೂ ಸ್ಥಾಪಿಸಲಾಗಿದೆ. ಆದಾಗ್ಯೂ ಕೆಲವರು ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುತ್ತಿರುವುದು ದುರದೃಷ್ಟಕರ ಬೆಳವಣಿಗೆ ಎಂದು ಅವರು ಹೇಳಿದ್ದಾರೆ.

ಇತ್ತೀಚೆಗೆ ಲಿಂಗಾಪುರ ಗ್ರಾಮ ವ್ಯಾಪ್ತಿಯ ಸ್ಮಶಾನದ ತಿರುವಿನ ರಸ್ತೆಬದಿಯಲ್ಲಿ ಗೃಹ ತ್ಯಾಜ್ಯದ ಜೊತೆಗೆ ಮಾಂಸಾಹಾರಿ ತ್ಯಾಜ್ಯವನ್ನೂ ಹಾಕುತ್ತಿರುವ ಘಟನೆಗಳು ಪುನರಾವರ್ತನೆಯಾಗುತ್ತಿವೆ. ಇದರಿಂದ ಪರಿಸರ ಮಾಲಿನ್ಯ ಉಂಟಾಗುವುದರ ಜೊತೆಗೆ ತ್ಯಾಜ್ಯಕ್ಕಾಗಿ ಬರುವ ಬೀದಿ ನಾಯಿಗಳಿಂದ ವಾಹನ ಸಂಚಾರಕ್ಕೂ ಅಪಾಯ ಎದುರಾಗುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ಈ ಹಿನ್ನಲೆ ಅಶುಚಿತ್ವಕ್ಕೆ ಕಾರಣರಾಗುತ್ತಿರುವವರ ವಿರುದ್ಧ ಸಂಬಂಧಪಟ್ಟ ಅಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳಬೇಕು. ಅಲ್ಲದೆ, ನಿಗದಿಪಡಿಸಿರುವ ಸ್ಥಳದಲ್ಲಿಯೇ ತ್ಯಾಜ್ಯ ವಿಲೇವಾರಿ ಮಾಡುವ ಕುರಿತು ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಈ ಹಿಂದೆಯೂ ಲಿಂಗಾಪುರ ಗ್ರಾಮದ ಮುಖ್ಯ ರಸ್ತೆಯ ಬದಿಯನ್ನು ಕೆಲವರು ತ್ಯಾಜ್ಯ ತಾಣವನ್ನಾಗಿ ಪರಿವರ್ತಿಸಿದ್ದರು. ಈ ಕುರಿತು ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾದ ಬಳಿಕ ಪಂಚಾಯಿತಿ ಸ್ಥಳವನ್ನು ಸ್ವಚ್ಛಗೊಳಿಸಿ, ನಿಯಮ ಉಲ್ಲಂಘಿಸಿದ ಕೆಲವರಿಗೆ ದಂಡ ವಿಧಿಸಿತ್ತು. ಆದರೂ ಸಮಸ್ಯೆ ಮತ್ತೆ ಮರುಕಳಿಸುತ್ತಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಶಾಶ್ವತ ಪರಿಹಾರಕ್ಕೆ ಮುಂದಾಗಬೇಕು ಎಂದು ಅವರು ಆಗ್ರಹಿಸಿದ್ದಾರೆ. ಗ್ರಾಮ ಪಂಚಾಯಿತಿ ಸದಸ್ಯ ಕಡೇಗರ್ಜೆ ವಿಜಯರಾಜ್ ಹಾಜರಿದ್ದರು.

ಹಸಿರಿನಿಂದ ಮಕ್ಕಳ ಮನಸ್ಸಿನ ಮೇಲೆ ಧನಾತ್ಮಕ ಪರಿಣಾಮ

• ಪ್ರಜೋದಯ ವರದಿ

ಅರಕಲಗೂಡು: ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು ಒಳ್ಳೆಯ ಪರಿಸರ ಇದ್ದಾಗ ಆರೋಗ್ಯವಂತ ಬದುಕು ಸಾಧ್ಯ ಎಂದು ತಹಶೀಲ್ದಾರ್ ಕೆ.ಸಿ. ಸೌಮ್ಯ ಅವರು ತಿಳಿಸಿದರು.

ಪಟ್ಟಣ ಪಂಚಾಯಿತಿ ಮತ್ತು ಶಿಕ್ಷಣ ಇಲಾಖೆ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಸಿರು ವಾತಾವರಣವು ಮಕ್ಕಳ ಮನಸ್ಸಿನ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ ಎಂದರು.

ಪಪಂ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್ ಮಾತನಾಡಿ, ಪಪಂ ಕಸದ ಗಾಡಿ ಬಂದಾಗ ಒಣ ಮತ್ತು ಹಸಿ ಕಸವನ್ನು ವಿಂಗಡಿಸಿ ನೀಡಬೇಕು. ಎಲ್ಲೆಂದರಲ್ಲಿ ಕಸ ಹಾಕಿ ಪರಿಸರ ಮಾಲಿನ್ಯ ಗೊಳಿಸಬಾರದು ಎಂದರು.

ಕಾರ್ಯಕ್ರಮದಲ್ಲಿ ನೆರೆದಿದ್ದ ವಿದ್ಯಾರ್ಥಿಗಳು ಮತ್ತು ಅಧಿಕಾರಿಗಳು ಪ್ರಕೃತಿ ಮಾತೆಯ ಹೆಸರಿನಲ್ಲಿ ಪ್ರತಿಜ್ಞಾವಿಧಿ ಪಡೆದರು. ವಿದ್ಯಾರ್ಥಿಗಳಲ್ಲಿ ಪರಿಸರ ಪ್ರಜ್ಞೆ ಮೂಡಿಸಲು ಜಾಗೃತಿ ಜಾಥಾ, ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಹಾಗೂ ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಬಿಇಒ ಕೆ.ಪಿ.ನಾರಾಯಣ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ, ತಾಲ್ಲೂಕು

ಅಂಡಮಾನ್ ದ್ವೀಪದಲ್ಲಿ ನೈಸರ್ಗಿಕ ಅನಿಲ ನಿಕ್ಷೇಪ

ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಮಾಹಿತಿ | ಇಂಧನ ಕೊರತೆ ನೀಗುವ ಭರವಸೆ

• ಪ್ರಜೋದಯ ವರದಿ

ನವದೆಹಲಿ: ಹೊರ್ಮುಜ್ ಬಿಕ್ಕಟ್ಟಿನಿಂದ ಭಾರತದಲ್ಲಿ ಹೆಚ್ಚಿರುವ ಇಂಧನ ಬಿಕ್ಕಟ್ಟಿನ ನಡುವೆ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಅಂಡಮಾನ್ ದ್ವೀಪದಲ್ಲಿ ನೈಸರ್ಗಿಕ ಅನಿಲ ನಿಕ್ಷೇಪ ಪತ್ತೆಯಾಗಿದೆ ಎಂದು ಸಿಹಿ ಸುದ್ದಿ ಹಂಚಿಕೊಟ್ಟಿದ್ದಾರೆ.

ಅಂಡಮಾನ್ ದ್ವೀಪಗಳ ಪೂರ್ವ ಕರಾವಳಿಯಿಂದ 15 ಕಿ.ಮೀ. ದೂರದಲ್ಲಿರುವ ಶ್ರೀ ವಿಜಯಪುರಂ-3 ಶೋಧನಾ ಬಾವಿಯಲ್ಲಿ ಸುಮಾರು 355 ಮೀಟರ್ ಆಳದಲ್ಲಿ ನೈಸರ್ಗಿಕ ಅನಿಲ ಪತ್ತೆಯಾಗಿದೆ. ಇದು ಅಂಡಮಾನ್ ಸಮುದ್ರದ ಅಪಾರ ಇಂಧನ ಸಾಮರ್ಥ್ಯವನ್ನು ಬಲಪಡಿಸುತ್ತದೆ ಎಂದು ಅವರು ಎಕ್ಸ್‌ನಲ್ಲಿ ಹೇಳಿಕೊಂಡಿದ್ದಾರೆ.

ಪ್ರಸ್ತುತ ಸಿಕ್ಕಿರುವ ನೈಸರ್ಗಿಕ ಅನಿಲದ ಗುಣಮಟ್ಟ ಹೇಗಿದೆ ಮತ್ತು ಅದು ಎಷ್ಟು ಉಪಯುಕ್ತವೆಂದು ತಿಳಿಯಲು ಆಯಿಲ್ ಇಂಡಿಯಾ ಸಂಸ್ಥೆಯು ಪರೀಕ್ಷೆಗಳನ್ನು ನಡೆಸುತ್ತಿದೆ. ಅದರ ವಾಣಿಜ್ಯ ಬಳಕೆ ಸಾಧ್ಯಾಸಾಧ್ಯತೆ ಪರಿಶೀಲಿಸಲಾಗುತ್ತಿದೆ. ಇಂಧನ ಉತ್ಪಾದನಾ ಕೇಂದ್ರ ವಾಗಿ ಹೊರಹೊಮ್ಮುವ ಭರವಸೆ ಭಾರತದ ಪ್ರಮುಖ ಇಂಧನ ಸಂಸ್ಥೆಯಾದ ಆಯಿಲ್ ಇಂಡಿಯಾ ಲಿಮಿಟೆಡ್, ಅಂಡಮಾನ್ ಕಡಲಾಚೆಯ ಪ್ರದೇಶದಲ್ಲಿ ಎರಡನೇ ಬಾರಿಗೆ ನೈಸರ್ಗಿಕ ಅನಿಲದ ನಿಕ್ಷೇಪವನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದೆ. ಅಂಡಮಾನ್ ಆಳವಿಲ್ಲದ ಕಡಲಾಚೆಯ ಬ್ಲಾಕ್‌ನಲ್ಲಿ ಕೈಗೊಳ್ಳಲಾದ ಪರಿಶೋಧನಾ ಕಾರ್ಯದ ಭಾಗವಾಗಿ, ವಿಜಯಪುರಂ -3 ಹೆಸರಿನ ಮೂರನೇ ಪರಿಶೋಧನಾ ಬಾವಿಯಲ್ಲಿ ಈ

ನೈಸರ್ಗಿಕ ಅನಿಲ ಪತ್ತೆಯಾಗಿದೆ ಎಂದು ಕಂಪನಿಯು ಶೇರು ಮಾರುಕಟ್ಟೆಗೆ ಅಧಿಕೃತ ಮಾಹಿತಿ ನೀಡಿದೆ. ಈ ಮಹತ್ವದ ಆವಿಷ್ಕಾರವು ಅಂಡಮಾನ್ ಇಂಧನ ವಲಯದಲ್ಲಿ ಅಡಗಿರುವ ಹೈಡ್ರೋಕಾರ್ಬನ್ ಸಾಮರ್ಥ್ಯಕ್ಕೆ ಮತ್ತಷ್ಟು ಬಲ ತುಂಬಿದ್ದು, ಭವಿಷ್ಯದಲ್ಲಿ ಈ ಪ್ರದೇಶವು ಭಾರತದ ಪ್ರಮುಖ ಇಂಧನ ಉತ್ಪಾದನಾ ಕೇಂದ್ರವಾಗಿ ಹೊರಹೊಮ್ಮುವ ಭರವಸೆ ಮೂಡಿಸಿದೆ.

ಕಡಲತೀರದಿಂದ ಸುಮಾರು 15 ಕಿ.ಮೀ. ದೂರದಲ್ಲಿ 355 ಮೀಟರ್ ಆಳದ ಸಮುದ್ರದಡಿಯಲ್ಲಿ ಓಪನ್ ಏಕ್ರೆಜ್ ಲೈಸೆನ್ಸಿಂಗ್ ಪಾಲಿಸಿ ಅಡಿಯಲ್ಲಿ ಈ ಬಾವಿಯನ್ನು ಕೊರೆಯಲಾಗಿತ್ತು. 1900 ಮೀಟರ್‌ಗಿಂತಲೂ ಹೆಚ್ಚಿನ ಆಳದಲ್ಲಿ ಆರಂಭಿಕ ಉತ್ಪಾದನಾ ಪರೀಕ್ಷೆಗಳನ್ನು ನಡೆಸಿದಾಗ ನಿರಂತರ ಜ್ವಾಲೆಯು ಹೊರಹೊಮ್ಮಿದ್ದು, ನೈಸರ್ಗಿಕ ಅನಿಲದ ಇರುವಿಕೆಯನ್ನು ದೃಢಪಡಿಸಿದೆ. ಸದ್ಯಕ್ಕೆ ಈ ಅನಿಲದ ಗುಣಮಟ್ಟ ಮತ್ತು ಮೂಲವನ್ನು ಪತ್ತೆ ಹಚ್ಚಲು ಕಂಪನಿಯು ವೈಜ್ಞಾನಿಕ ಅಧ್ಯಯನಗಳನ್ನು ನಡೆಸುತ್ತಿದೆ.

ಆಶಾದಾಯಕ ಬೆಳವಣಿಗೆ

2025ರ ಸೆಪ್ಟೆಂಬರ್‌ನಲ್ಲಿ ಇದೇ ಬ್ಲಾಕ್‌ನ ವಿಜಯಪುರಂ-2 ಬಾವಿಯಲ್ಲಿ ಅನಿಲ ಪತ್ತೆಯಾಗಿತ್ತು. ಸದ್ಯ ಆಯಿಲ್ ಇಂಡಿಯಾ ಸಂಸ್ಥೆಯು ಈ ಭಾಗದಲ್ಲಿ ಮತ್ತಷ್ಟು ತೈಲ ಮತ್ತು ಅನಿಲದ ನಿಕ್ಷೇಪಗಳ ಪ್ರಮಾಣವನ್ನು ನಿಖರವಾಗಿ ಅಳೆಯಲು ಆಧುನಿಕ ತಂತ್ರಜ್ಞಾನದ ಮೂಲಕ ಪರಿಶೋಧನೆಯನ್ನು ತೀವ್ರಗೊಳಿಸಿದೆ. ವಿದೇಶಿ ಇಂಧನ ಆಮದಿನ ಮೇಲಿನ ಅವಲಂಬನೆಯನ್ನು ತಗ್ಗಿಸಲು ಭಾರತ ಸರ್ಕಾರ ಯತ್ನಿಸುತ್ತಿರುವ ಇಂದಿನ ಸಂದರ್ಭದಲ್ಲಿ, ಈ ಆವಿಷ್ಕಾರವು ದೇಶದ ಇಂಧನ ಭದ್ರತೆಯ ದೃಷ್ಟಿಯಿಂದ ಅತ್ಯಂತ ಆಶಾದಾಯಕ ಬೆಳವಣಿಗೆಯಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಇರಾನ್ ಡ್ರೋನ್ ಹೊಡೆದುರುಳಿಸಿದ ಅಮೇರಿಕಾ

ವಾಷಿಂಗ್ಟನ್: ಹೊರ್ಮುಜ್ ಜಲಸಂಧಿಯನ್ನು ಗುರಿಯಾಗಿಸಿಕೊಂಡು ಹಾರಿಸಲಾದ ಇರಾನ್‌ನ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಅಮೇರಿಕಾ ಸೇನೆ ಹೇಳಿದೆ.

ಹೊರ್ಮುಜ್ ಜಲಸಂಧಿಯತ್ತ ಉಡಾಯಿಸಿದ್ದ ಇರಾನ್‌ನ ನಾಲ್ಕು ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ. ದಾಳಿಗೆ ಪ್ರತಿಯಾಗಿ ಜಲಸಂಧಿಯಲ್ಲಿರುವ ಒಂದು ದ್ವೀಪ ಸೇರಿ ಇರಾನ್‌ನ ಕರಾವಳಿ ಕಣ್ಗಾವಲು ರೇಡಾರ್ ಕೇಂದ್ರಗಳ ಮೇಲೆ ದಾಳಿ ನಡೆಸಿದ್ದೇವೆಂದು ಅಮೇರಿಕಾ ಸೇನೆ ತಿಳಿಸಿದೆ. ಇರಾನ್ ಮೇಲಿನ ಟ್ರಂಪ್ ಆಡಳಿತದ ಒತ್ತಡ ಹೆಚ್ಚಾಗುತ್ತಿರುವ ಬೆನ್ನಲ್ಲೇ ಈ ಘಟನೆ ನಡೆದಿದ್ದು, ಪ್ರಸ್ತುತ ಇರುವ ಅಸ್ಥಿರ ಕದನ ವಿರಾಮಕ್ಕೆ ಮತ್ತಷ್ಟು ಅಪಾಯ ಎದುರಾಗಿದೆ. ಇರಾನ್ ಉಡಾಯಿಸಿದ್ದ ಡ್ರೋನ್‌ಗಳು ಪ್ರಾದೇಶಿಕ ಸಮುದ್ರ ಸಂಚಾರಕ್ಕೆ ಆತಂಕ ತಂದೊಡ್ಡಿದ್ದವು ಎಂದು ಅಮೇರಿಕಾ ಸೇನೆಯ ಸೆಂಟ್ರಲ್ ಕಮಾಂಡ್ ತಿಳಿಸಿದೆ.

ಜಾಗತಿಕ ತೈಲ ಮತ್ತು ನೈಸರ್ಗಿಕ ಅನಿಲ ಸಾಗಣೆಯ ಪ್ರಮುಖ ಮಾರ್ಗವಾಗಿರುವ ಹೊರ್ಮುಜ್ ಜಲಸಂಧಿಯ ಮೇಲೆ ಇರಾನ್ ಹಿಡಿತ ಸಾಧಿಸಲು ಯತ್ನಿಸುತ್ತಿದೆ. ಅದಕ್ಕೆ ಪ್ರತಿಯಾಗಿ ಅಮೆರಿಕ ಸೇನೆಯು ಇರಾನ್‌ನ ಬಂದರುಗಳ ಮೇಲೆ ದಿಗ್ಬಂಧನ ವಿಧಿಸುತ್ತಿದೆ. ಅಮೇರಿಕಾ-ಇರಾನ್ ಸಂಘರ್ಷದಿಂದಾಗಿ ಜಾಗತಿಕವಾಗಿ ಇಂಧನ ಬೆಲೆಗಳು ಗಗನಕ್ಕೇರಿವೆ.

ಆಶಾಭಾವನೆ ಮೂಡಿಸಿದ ಮುಂಗಾರು: ಕೃಷಿ ಕಾರ್ಯ ಚುರುಕು

» ಮೊದಲನೇ ಪುಟದಿಂದ

ನಿರೀಕ್ಷೆ ವ್ಯಕ್ತವಾಗಿದ್ದು, ಕೃಷಿ ವಲಯದಲ್ಲಿ ಹೊಸ ಉತ್ಸಾಹ ಕಂಡುಬಂದಿದೆ. ಮಳೆ ಮುಂದುವರಿದರೆ ಭತ್ತ ಸೇರಿ ಪ್ರಮುಖ ಬೆಳೆಗಳ ವಿಸ್ತೀರ್ಣವೂ ಹೆಚ್ಚಾಗುವ ಸಾಧ್ಯತೆ ಇದೆ. ಪೂರ್ವ ಮುಂಗಾರು ನಿರಾಸೆ ಮೂಡಿಸಿದ್ದರೂ, ಸಮಯಕ್ಕೆ ಸರಿಯಾಗಿ ಆರಂಭವಾಗುತ್ತಿರುವ ಮುಂಗಾರು ಮಳೆ ಜಿಲ್ಲೆಯ ರೈತರಲ್ಲಿ ಹೊಸ ಭರವಸೆ ಮೂಡಿಸಿದ್ದು, ಈ ಬಾರಿಯ ಕೃಷಿ ಚಟುವಟಿಕೆಗಳು ಉತ್ತಮ ಫಲಿತಾಂಶ ನೀಡುವ ನಿರೀಕ್ಷೆ ಹೆಚ್ಚಿಸಿದೆ.

54,809 ಮೆಟ್ರಿಕ್ ಟನ್ ಗೊಬ್ಬರ ದಾಸ್ತಾನು

ಮುಂಗಾರು ಹಂಗಾಮಿಗೆ ಆರಂಭಿಕ ಶಿಲ್ಕು 66,948 ಮೆಟ್ರಿಕ್ ಟನ್ ರಸಗೊಬ್ಬರವಿದ್ದು, ಜಿಲ್ಲೆಗೆ ಈವರೆ ಒಟ್ಟು 31,023 ಮೆಟ್ರಿಕ್ ಟನ್ ರಸಗೊಬ್ಬರ ಸರಬರಾಜಾಗಿದೆ. ಪ್ರಸ್ತುತ 97,971 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನಿದ್ದು, ಏಪ್ರಿಲ್ ತಿಂಗಳಿನಿಂದ ಇಲ್ಲಿಯವರೆಗೆ 45,947 ಮೆಟ್ರಿಕ್ ಟನ್ ವಿವಿಧ ರಸಗೊಬ್ಬರ ವಿತರಣೆ ಮಾಡಲಾಗಿದೆ. ಪ್ರಸ್ತುತ ಸಗಟು ಮತ್ತು ಚಿಲ್ಲರೆ ರಸಗೊಬ್ಬರ ಡೀಲರ್‌ಗಳ ಬಳಿ 51,241 ಮೆಟ್ರಿಕ್ ಟನ್ ಹಾಗು ಕೆ.ಎಸ್.ಸಿ.ಎಂ.ಎಫ್. ಮತ್ತು ಕೆ.ಎಸ್.ಎಸ್.ಸಿ. ಯವರ ಬಳಿ 3568 ಮೆ.ಟನ್ ಸೇರಿ ಒಟ್ಟು 54,809 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಜಿಲ್ಲೆಯಲ್ಲಿ ಲಭ್ಯವಿದೆ.

ಪರೀಕ್ಷೆಗೆ ಒಳಪಡಿಸಿದ ಬಿತ್ತನೆ ಬೀಜ ವಿತರಣೆ

ಬೀಜೋತ್ಪಾದನೆ ಸಂಸ್ಥೆಗಳು ಉತ್ಪಾದಿಸುವ ಹೈಬ್ರಿಡ್ ಬೀಜಗಳನ್ನು ಜಿಲ್ಲೆಗೆ ಸರಬರಾಜು ಮಾಡುವ ಮೊದಲು ಎಲ್ಲಾ ಲಾಟಿನ ಬಿತ್ತನೆ ಬೀಜ ಮಾದರಿಗಳನ್ನು ಪರೀಕ್ಷೆಗಾಗಿ ಮಂಡ್ಯ ಕೃಷಿ ವಿಶ್ವವಿದ್ಯಾಲಯಕ್ಕೆ ಕಳುಹಿಸಿ, ಬಿತ್ತನೆ ಬೀಜವು ರೋಗ ಮುಕ್ತವಾಗಿದೆ ಎಂದು ದೃಢೀಕರಿಸಿಕೊಳ್ಳಲಾಗಿದೆ. ಒಟ್ಟು 51 ಕಂಪೆನಿಯ 401 ಲಾಟ್‌ಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ.

ಕಳೆದ ಬಾರಿ ಜೋಳಕ್ಕೆ ಬಿಳಿಸುಳಿ ರೋಗ ಕಾಣಿಸಿಕೊಂಡಿದ್ದರಿಂದ ಈ ಭಾರೀ ಕ್ರಮ ಕೈಗೊಳ್ಳಲಾಗಿದೆ. ಕೃಷಿ ವಿಜ್ಞಾನಿಗಳು ರೋಗ ಮುಕ್ತವೆಂದು ದೃಢೀಕರಿಸಿದ ಮುಸುಕಿನ ಜೋಳದ ಬಿತ್ತನೆ ಬೀಜ ವನ್ನು ಮಾತ್ರ ರೈತರಿಗೆ ಖಾಸಗಿ ಮಾರಾಟಗಾರರ ಮೂಲಕ ಹಾಗು ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ.

ಅಸಾಂಕ್ರಾಮಿಕ ರೋಗಗಳ ತಪಾಸಣೆ ಮಾಡಿಸಲು ಸಲಹೆ

ಜಾವಗಲ್: ಪ್ರತಿಯೊಬ್ಬರೂ ಕನಿಷ್ಠ ಮೂರು ತಿಂಗಳಿಗೊಮ್ಮೆ ಅಸಾಂಕ್ರಾಮಿಕ ರೋಗಗಳ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ. ರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚುವುದರಿಂದ ಗಂಭೀರ ಆರೋಗ್ಯ ಸಮಸ್ಯೆಗಳನ್ನು ತಡೆಯಲು ಸಾಧ್ಯವಾಗುತ್ತದೆಂದು ಉಂಡಿಗನಾಳು ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ॥ಕೆ.ಆರ್. ದೀಪಕ್ ಅವರು ಸಲಹೆ ನೀಡಿದರು.

ಹೋಬಳಿಯ ಬಂದೂರು ಗ್ರಾಮದಲ್ಲಿ ಉಂಡಿಗನಾಳು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗು ಹರ್ಷಿತ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಅನಿಮಿಯಾ ಮುಕ್ತ ಭಾರತ ಅಭಿಯಾನದ ಅಂಗವಾಗಿ 50ಕ್ಕೂ ಹೆಚ್ಚು ಗ್ರಾಮಸ್ಥರ ಆರೋಗ್ಯ ತಪಾಸಣೆ ನಡೆಸಲಾಗಿದೆ. ಈ ಪೈಕಿ 20ಕ್ಕೂ ಹೆಚ್ಚು ಮಂದಿಯಲ್ಲಿ ಹಿಮೋಗ್ಲೋಬಿನ್ ಪ್ರಮಾಣ ಕಡಿಮೆಯಿರುವುದು ಪತ್ತೆಯಾಗಿದೆ. ಅಂತಹವರಿಗೆ ಉಚಿತವಾಗಿ ಕಬ್ಬಿಣಾಂಶ (ಐರನ್) ಮಾತ್ರೆಗಳು ಹಾಗೂ ಸಿರಪ್ ವಿತರಿಸಲಾಗಿದೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಉಮಾಮಹೇಶ್ವರಪ್ಪ ಅವರು ಮಾತನಾಡಿ, ಗ್ರಾಮೀಣ ಪ್ರದೇಶದ ಜನರು ಇಂತಹ ಆರೋಗ್ಯ ಶಿಬಿರಗಳ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅಗತ್ಯವೆಂದು ಹೇಳಿದರು.

ಸಾಂಕ್ರಾಮಿಕ ಹಾಗು ಅಸಾಂಕ್ರಾಮಿಕ ರೋಗಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡ ಲಾಯಿತು. ವಿಶೇಷವಾಗಿ ರಕ್ತದೊತ್ತಡ, ಮಧುಮೇಹ ಮತ್ತು ರಕ್ತಹೀನತೆ (ಅನಿಮಿಯಾ) ಸೇರಿ ಅಸಾಂಕ್ರಾಮಿಕ ರೋಗಗಳ ತಪಾಸಣೆಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು.

ಆರೋಗ್ಯ ಸಿಬ್ಬಂದಿ, ಹರ್ಷಿತ ಸಂಸ್ಥೆಯ ಪ್ರಯೋಗಾಲಯ ತಂತ್ರಜ್ಞ ಅಭಿಷೇಕ್, ತಾಲ್ಲೂಕು ಘಟಕದ ಸಂಯೋಜಕರು, ಆಶಾ ಕಾರ್ಯಕರ್ತೆಯರು ಇದ್ದರು.

2ನೇ ವಿಶ್ವಯುದ್ಧ ವಿನಾಶಕಾರಿ ಜಾಗತಿಕ ಸಂಘರ್ಷ

• ಪ್ರಜೋದಯ ವರದಿ

ಹಾಸನ: ಎರಡನೇ ಮಹಾಯುದ್ಧವು ಮಾನವ ಇತಿಹಾಸದ ಅತ್ಯಂತ ವಿನಾಶಕಾರಿ ಜಾಗತಿಕ ಸಂಘರ್ಷವಾಗಿದೆ ಎಂದು ಸಾಹಿತಿ ಮೇಟಿಕೆರೆ ಹಿರಿಯಣ್ಣ ಅವರು ಹೇಳಿದರು.

ನಗರದ ಸಪ್ನ ಬುಕ್ ಹೌಸ್ ಸಭಾಂಗಣದಲ್ಲಿ ರಾಜ್ಯ ಸ್ಪಂದನ ಸಿರಿ ವೇದಿಕೆ ಜಿಲ್ಲಾ ಘಟಕ ಹಾಗು ಸಪ್ನ ಬುಕ್ ಹೌಸ್ ವತಿಯಿಂದ ಶನಿವಾರ ನಡೆದ ರಾಷ್ಟ್ರೀಯ ಐತಿಹಾಸಿಕ ದಿನ ಮತ್ತು ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತನಾಡಿದ ಅವರು, 1939 ರಿಂದ 1945ರ ವರೆಗೆ ನಡೆದ 2ನೇ ಮಹಾಯುದ್ಧದಲ್ಲಿ ಜೀವ ಹಾನಿ ಹಾಗು ಅಪಾರ ಆಸ್ತಿ-ಪಾಸ್ತಿ ನಷ್ಟವಾಯಿತು. ಮೊದಲ ಮಹಾಯುದ್ಧದ ನಂತರವೇ ಶಾಂತಿ ಸ್ಥಾಪನೆಗೆ ವಿಶ್ವ ನಾಯಕರು ದೂರದೃಷ್ಟಿಯ ನಿರ್ಧಾರಗಳನ್ನು ಕೈಗೊಂಡಿದ್ದರೆ ಎರಡನೇ ಮಹಾಯುದ್ಧವನ್ನು ತಪ್ಪಿಸಬಹುದಾಗಿತ್ತು ಎಂದರು.

ಸಾಮ್ರಾಜ್ಯ ವಿಸ್ತರಣೆಯ ಹಂಬಲ, ಅತಿಯಾದ ರಾಷ್ಟ್ರೀಯತೆ, ಕೈಗಾರಿಕಾ ಪ್ರಾಬಲ್ಯದ ಸ್ಪರ್ಧೆ ಹಾಗು ವೈಜ್ಞಾನಿಕ ಸಾಧನೆಗಳ ಮೇಲಿನ ಹಿಡಿತ ಸಾಧಿಸುವ ಮನೋಭಾವವೇ 2ನೇ

ಮಹಾಯುದ್ಧಕ್ಕೆ ಪ್ರಮುಖ ಕಾರಣಗಳಾಗಿದ್ದವು. ಮೂರನೇ ಮಹಾಯುದ್ಧದಂತಹ ಸ್ಥಿತಿ ಎದುರಾದರೆ ಮಾನವ ಕುಲವೇ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇರುವುದರಿಂದ ವಿಶ್ವ ರಾಷ್ಟ್ರಗಳು ಶಾಂತಿ ಮತ್ತು ಸಹಬಾಳ್ವೆಗೆ ಆದ್ಯತೆ ನೀಡಬೇಕಿದೆ. ಯುದ್ಧಗಳು ಕೇವಲ ಜೀವ ಹಾನಿಗೆ ಸೀಮಿತವಾಗುವುದಿಲ್ಲ, ಕೃಷಿ, ಆರ್ಥಿಕತೆ, ಪರಿಸರ ಮತ್ತು ಸಾಮಾಜಿಕ ವ್ಯವಸ್ಥೆಗಳ ಮೇಲೂ ದೀರ್ಘಕಾಲದ ಪರಿಣಾಮ ಬೀರುತ್ತವೆಂದರು.

ಇಂದಿಗೂ ಜಾಗತಿಕ ಸಂಘರ್ಷಗಳ ಪರಿಣಾಮ ಅಗತ್ಯ ವಸ್ತುಗಳ ಬೆಲೆ ಏರಿಕೆ, ಸಂಪನ್ಮೂಲ ಕೊರತೆ ಹಾಗು ಪರಿಸರ ಹಾನಿಯನ್ನು ಅನುಭವಿಸುತ್ತಿದ್ದೇವೆ. ಪ್ರಕೃತಿಯಿಂದ ಎಲ್ಲಾ ರೀತಿಯ ಲಾಭ ಪಡೆಯುತ್ತಿರುವ ಮಾನವನೇ ಪರಿಸರಕ್ಕೆ ಧಕ್ಕೆ ಉಂಟು ಮಾಡುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ವಿಷಾದ ವ್ಯಕ್ತಪಡಿಸಿದರು.

ರಾಜ್ಯ ಸ್ಪಂದನ ಸಿರಿ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷೆ ಜಿ.ಎಸ್. ಕಲಾವತಿ ಮಧುಸೂದನ್ ಅವರು ಮಾತನಾಡಿ, ಇತಿಹಾಸದ ಅಧ್ಯಯನದ ಜೊತೆಗೆ ಪರಿಸರ ಸಂರಕ್ಷಣೆಯ ಅರಿವು ಯುವ ಪೀಳಿಗೆಯಲ್ಲಿ ಬೆಳೆಸುವುದು ಇಂದಿನ ಅಗತ್ಯವಾಗಿದೆ ಎಂದರು.

ದೇಶಭಕ್ತಿ ಗೀತೆಗಳ ಗಾಯನ, ಮಕ್ಕಳಿಂದ ಏಕಪಾತ್ರಾಭಿನಯ ಹಾಗು ಕವಿಗೋಷ್ಠಿ ಕಾರ್ಯ ಕ್ರಮದ ವಿಶೇಷ ಆಕರ್ಷಣೆಯಾಗಿದ್ದವು. ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಕವಿಗಳು ದೇಶಪ್ರೇಮ, ಪರಿಸರ ಸಂರಕ್ಷಣೆ, ಸಾಮಾಜಿಕ ಜಾಗೃತಿ ಮತ್ತು ಮಾನವೀಯ ಮೌಲ್ಯಗಳನ್ನು ಪ್ರತಿಬಿಂಬಿಸುವ ಕವನಗಳನ್ನು ವಾಚಿಸಿ ಮೆಚ್ಚುಗೆ ಗಳಿಸಿದರು. ಭಾರತದ ಮೇಲೆ ಎರಡನೇ ಮಹಾಯುದ್ಧದ ಪರಿಣಾಮ ವಿಷಯ ಕುರಿತು ವಿದ್ಯಾರ್ಥಿಗಳಿಂದ ವಿಚಾರ ಗೋಷ್ಠಿ ಮತ್ತು ಸಂವಾದ ಏರ್ಪಡಿಸಲಾಗಿತ್ತು. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾರತದ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗು ಸ್ವಾತಂತ್ರ್ಯ ಹೋರಾಟದ ಮೇಲೆ 2ನೇ ಮಹಾಯುದ್ಧ ಬೀರಿದ ಪರಿಣಾಮಗಳ ಕುರಿತು ತಮ್ಮ ಅಭಿಪ್ರಾಯ ಮಂಡಿಸಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮನು ಕುಮಾರ್, ಸಾಹಿತಿ ಸುಶೀಲಾ ಸೋಮಶೇಖರ್, ಕನ್ನಡ ಪ್ರಾಧ್ಯಾಪಕರಾದ ಪ್ರಸನ್ನ, ಕಾಂತರಾಜ್, ಟಿ.ಹೆಚ್.ಅಪ್ಪಾಜಿಗೌಡ, ಪತ್ರಕರ್ತರಾದ ಬಿ.ಆರ್.ಬೊಮ್ಮೇಗೌಡ, ವೆಂಕಟೇಶ್, ಭಾರತಿ ಹಾದಿಗೆ, ಸಾಹಿತಿ ಗೊರೂರು ರಾಜು, ಕೆ.ಟಿ.ಜಯಶ್ರೀ, ಸಪ್ನ ಬುಕ್ ಹೌಸ್‌ನ ಶಾಂತಲ, ಸಾವಿತ್ರಿ ಬಾಯಿ, ಸುನಿತಾ ಕಿರಣ್, ಶ್ವೇತಾ ಹೇಮೇಶ್, ಬಿ.ಎನ್. ಗಿರಿಜಾಂಬ ಮೊದಲಾದವರಿದ್ದರು.

ಹೊಳೆನರಸೀಪುರದಲ್ಲಿ ಎಸ್‌ಐಆರ್‌ಗೆ ಸಿದ್ಧತೆ

• ಪ್ರಜೋದಯ ವರದಿ

ಹೊಳೆನರಸೀಪುರ: ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ಕರ್ನಾಟಕ ದಲ್ಲೂ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕೈಗೊಂಡಿದ್ದು ಕ್ಷೇತ್ರದಲ್ಲಿ ಈ ಪ್ರಕ್ರಿಯೆಗಾಗಿ 325 ಬೂತ್ ಮಟ್ಟದ ಅಧಿಕಾರಿಗಳ ನಿಯೋಜಿಸಲಾಗಿದೆಂದು ತಾಲ್ಲೂಕು ಮತದಾರರ ಪಟ್ಟಿಯ ವಿಶೇಷ ನೋಂದಣಾಧಿಕಾರಿ ಅಧಿಕಾರಿ ವಿ.ಮಂಜುನಾಥ್ ಅವರು ತಿಳಿಸಿದರು.

ಪಟ್ಟಣದ ತಾಲ್ಲೂಕು ಕಚೇರಿ ಸಭಾಗಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಕ್ರಮದ ವೇಳಾಪಟ್ಟಿ ತಿಳಿಸಿದರು. ವಿಶೇಷ ಸಮಗ್ರ ಪರಿಷ್ಕರಣೆಗೆ ಅ.1 ಅರ್ಹತಾ ದಿನವಾಗಿದೆ. ಅದಕ್ಕೂ ಮೊದಲು ಪೂರ್ವ ತಯಾರಿ, ತರಬೇತಿ ಮತ್ತು ಮುದ್ರಣ ಕೆಲಸ ಜೂ.20 ರಿಂದ 29ರ ವರೆಗೆ ನಡೆಯಲಿದೆ. ಮತಗಟ್ಟೆ ಅಧಿಕಾರಿಯಿಂದ ಮನೆ-ಮನೆ ಭೇಟಿ ಜೂ.30 ರಿಂದ ಜು.29ರ ವರೆಗೆ ನಡೆಯಲಿದೆ ಎಂದರು.

ಮತಗಟ್ಟೆಗಳ ಪುನರ್‌ವಿಂಗಡಣೆ ಕಾರ್ಯ ಜು.29ರ ವರೆಗೆ ನಡೆದರೆ, ಕರಡು ಮತದಾರರ ಪಟ್ಟಿ ಆ.5 ರಂದು ಪ್ರಕಟವಾಗಲಿದೆ. ಹಕ್ಕು ಮತ್ತು

ಆಕ್ಷೇಪಣೆ ಸಲ್ಲಿಸಲು ಆ.5 ರಿಂದ ಸೆ.4ರ ವರೆಗೆ ಅವಕಾಶ ನೀಡಲಾಗಿದೆ ಎಂದರು.

ಸೂಚನೆ ಹಂತ/ಹಕ್ಕು ಮತ್ತು ಆಕ್ಷೇಪಣೆ ತಿರುವಳಿಗೆ ಆ.5 ರಿಂದ ಅ.3ರ ವರೆಗೆ